ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795

EMAIL : dairyadadaari@gmail.com

ಸಂಪುಟ: 01 ಸಂಚಿಕೆ: 125

ಬೆಲೆ ರೂ : 2.00

ರಾಯಚೂರು

ಪುಟ: 4

ಗುರುವಾರ: 23-04-2026

# ಕಾಂಗ್ರೆಸ್‌ಗೆ ಮುಸ್ಲಿಂ ನಾಯಕರಿಂದ ಎಚ್ಚರಿಕೆ

## "ಅನ್ಯಾಯ ಮುಂದುವರಿದರೆ ಚುನಾವಣೆಯಲ್ಲಿ ತಕ್ಕ ಉತ್ತರ"




**ಬೆಂಗಳೂರು, ಏ.22:** ರಾಜ್ಯದ ರಾಜಕೀಯದಲ್ಲಿ ಚರ್ಚೆಗೆ ಕಾರಣವಾಗುವ ಹೇಳಿಕೆಯಲ್ಲಿ, ಮುಸ್ಲಿಂ ಧರ್ಮಗುರುಗಳು ಕಾಂಗ್ರೆಸ್ ಪಕ್ಷದ ವಿರುದ್ಧ ಅಸಮಾಧಾನ ವ್ಯಕ್ತಪಡಿಸಿ, ಮುಂದಿನ ಚುನಾವಣೆಯಲ್ಲಿ ತಕ್ಕ ಪ್ರತಿಕ್ರಿಯೆ ನೀಡುವುದಾಗಿ ಎಚ್ಚರಿಕೆ ನೀಡಿದ್ದಾರೆ.

ನಗರದ ಪ್ರೆಸ್ ಕ್ಲಬ್‌ನಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಮೌಲಾನ ಮುಫ್ತಿ ಸಯ್ಯದ್ ಇಬ್ರಾಹಿಂ ಅವರು, ಕಳೆದ ಸುಮಾರು 70 ವರ್ಷಗಳಿಂದ ಮುಸ್ಲಿಂ ಸಮುದಾಯ ಕಾಂಗ್ರೆಸ್ ಪಕ್ಷಕ್ಕೆ ಬೆಂಬಲ ನೀಡುತ್ತಿದೆ. ಆದರೆ, ಸಮುದಾಯದ ಹಿತಾಸಕ್ತಿಗಳಿಗೆ ನ್ಯಾಯ ಸಿಗುತ್ತಿಲ್ಲ ಎಂದು ಆರೋಪಿಸಿದರು.

"ನಮ್ಮ ಸಮುದಾಯದಿಂದ ಮತಗಳನ್ನು ಪಡೆಯುವ ಕಾಂಗ್ರೆಸ್ ನಾಯಕರು, ನಮ್ಮ ಸಮಸ್ಯೆಗಳ ಪರಿಹಾರಕ್ಕೆ ಪ್ರಾಮುಖ್ಯತೆ ನೀಡುತ್ತಿಲ್ಲ. ಇದೇ ಸ್ಥಿತಿ ಮುಂದುವರಿದರೆ, ಮುಂದಿನ ಚುನಾವಣೆಯಲ್ಲಿ ನಾವು ತಕ್ಕ ಉತ್ತರ ನೀಡಬೇಕಾಗುತ್ತದೆ" ಎಂದು ಹೇಳಿದರು.

**ಹಿರಿಯ ನಾಯಕರ ನಿರ್ಲಕ್ಷ್ಯ ಆರೋಪ:** ದಾವಣಗೆರೆ ಉಪಚುನಾವಣೆಯನ್ನು ಉಲ್ಲೇಖಿಸಿದ ಅವರು, ಪಕ್ಷದ ಹಿರಿಯ ಮುಸ್ಲಿಂ ನಾಯಕರನ್ನು ಉದ್ದೇಶಪೂರ್ವಕವಾಗಿ ಕಡೆಗಣಿಸಲಾಗಿದೆ ಎಂದು ಆರೋಪಿಸಿದರು.

ಅಬ್ದುಲ್ ಜಬ್ಬಾರ್, ನಸೀರ್ ಅಹಮದ್ ಸೇರಿದಂತೆ ಹಲವು ನಾಯಕರು ದೀರ್ಘಕಾಲದಿಂದ ಕಾಂಗ್ರೆಸ್ ಪಕ್ಷಕ್ಕೆ ಸೇವೆ ಸಲ್ಲಿಸಿದ್ದರೂ, ಅವರಿಗೆ ಸಮರ್ಪಕ ಗೌರವ ನೀಡಲಾಗುತ್ತಿಲ್ಲ ಎಂದು ಹೇಳಿದರು.

ಮುಸ್ಲಿಂ ಸಮುದಾಯದ ಪ್ರಭಾವಿ ನಾಯಕ ಚಚಿಟಜಜಡಿ ಯಿಟಜಜ ಏಃಚಿಟಿ ಅವರನ್ನು ಗುರಿಯಾಗಿಸಿರುವುದು ಸರಿಯಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದರು.

**ಹಿಜಾಬ್, ಮೀಸಲಾತಿ ಪ್ರಶ್ನೆಗಳು:** ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ನಂತರವೂ ಹಿಜಾಬ್ ವಿವಾದಕ್ಕೆ ಶಾಶ್ವತ ಪರಿಹಾರ ಕಂಡುಕೊಳ್ಳಲಾಗಿಲ್ಲ ಎಂದು ಟೀಕಿಸಿದರು.

ಮುಸ್ಲಿಂ ಸಮುದಾಯಕ್ಕೆ ನೀಡಲಾಗಿದ್ದ 4% ಮೀಸಲಾತಿಯನ್ನು ಮರುಸ್ಥಾಪಿಸಲು ಸರ್ಕಾರ ವಿಫಲವಾಗಿದೆ ಎಂದು ಹೇಳಿದರು. "ಮಕ್ಕಳಿಗೆ ಚಾಕ್ಲೆಟ್ ಕೊಟ್ಟಂತೆ ಸಣ್ಣಸಣ್ಣ ಸೌಲಭ್ಯಗಳನ್ನು ನೀಡುವುದರಿಂದ ಸಮಸ್ಯೆಗಳು ಬಗೆಹರಿಯುವುದಿಲ್ಲ. ನಮ್ಮ ಸಮುದಾಯದ ನಾಯಕರಿಗೆ ಗೌರವ ಮತ್ತು ಹಕ್ಕುಗಳನ್ನು ನೀಡಬೇಕು" ಎಂದು ಒತ್ತಾಯಿಸಿದರು.

**"ಕಾಂಗ್ರೆಸ್‌ಗೆ ಮುಸ್ಲಿಂ ಅಗತ್ಯ":** ಮುಸ್ಲಿಂ ಸಮುದಾಯದ ರಾಜಕೀಯ ಪ್ರಭಾವವನ್ನು ಉಲ್ಲೇಖಿಸಿದ ಅವರು, "ವಿಧಾನಸೌಧದಲ್ಲಿ ಯಾರೇ ಅಧಿಕಾರದಲ್ಲಿದ್ದರೂ, ಅದರಲ್ಲಿ ಮುಸ್ಲಿಂ ಸಮುದಾಯದ ಪಾತ್ರ ಇದೆ. ಕಾಂಗ್ರೆಸ್‌ಗೆ ಮುಸ್ಲಿಂ ಸಮುದಾಯದ ಬೆಂಬಲ ಅಗತ್ಯ, ಆದರೆ ಮುಸ್ಲಿಮರಿಗೆ ಕಾಂಗ್ರೆಸ್ ಅನಿವಾರ್ಯವಲ್ಲ" ಎಂದು ಹೇಳಿದರು.

**ರಾಜಕೀಯ ಚರ್ಚೆಗೆ ಕಾರಣ:** ಮುಸ್ಲಿಂ ನಾಯಕರ ಈ ಹೇಳಿಕೆ ರಾಜ್ಯ ರಾಜಕೀಯದಲ್ಲಿ ಹೊಸ ಚರ್ಚೆಗೆ ಕಾರಣವಾಗಿದ್ದು, ಮುಂಬರುವ ಚುನಾವಣೆಯಲ್ಲಿ ಇದರ ಪರಿಣಾಮ ಹೇಗಿರಲಿದೆ ಎಂಬುದು ಕುತೂಹಲ ಮೂಡಿಸಿದೆ. ಕಾಂಗ್ರೆಸ್ ಪಕ್ಷ ಈ ಆರೋಪಗಳಿಗೆ ಯಾವ ರೀತಿಯಲ್ಲಿ ಪ್ರತಿಕ್ರಿಯಿಸುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ.

# ಪಟ್ಟಣದಲ್ಲಿ ಪುರಸಭೆ ವತಿಯಿಂದ ಜನಗಣತಿ



ಧೈರ್ಯದ ದಾರಿ

**ಮಾನ್ವಿ:** ಪಟ್ಟಣದಲ್ಲಿ ಪುರಸಭೆ ವತಿಯಿಂದ ಜನಗಣತಿ ಕಾರ್ಯ ನಡೆಯುತ್ತಿದು ಗಣತಿದಾರರಾದ ಸಂಗಮೇಶ ಮುಧೋಳ್ ಮೇಲ್ವಿಚರಕಾರದ ಸೋಮಶೇಖರ ರವರು ಮಾನ್ವಿ ಪಟ್ಟಣದಲ್ಲಿನ ತಹಶೀಲ್ದಾರ್ ರವರ ನಿವಾಸದಲ್ಲಿ ತಹಶೀಲ್ದಾರ್ ಭೀಮರಾಯ ಬಿ.ರಾಮಸಮುದ್ರ ರವರಿಂದ ಅಗತ್ಯ ಮಾಹಿತಿ ಪಡೆದು ದಾಖಲಿಸಿಕೊಂಡರು

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

6360866626

# ಹಳೆ ಶಿಲಾಯುಗದ ಸಂಸ್ಕೃತಿ ಪಳೆಯುಳಿಕೆ ಪುನರುಜ್ಜೀವನಗೊಳಿಸಲು ಈಶ್ವರ ಕುಮಾರ್ ಕಾಂದೂ ಸಲಹೆ




ಧೈರ್ಯದ ದಾರಿ

**ರಾಯಚೂರು:** ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ನಾಗಲಾಪೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಪಿಕಳಿಹಾಳ ಗ್ರಾಮದ ಗುಡ್ಡದಲ್ಲಿರುವ ಹಳೆ ಶಿಲಾಯುಗದ ಸ್ಥಳಕ್ಕೆ ಏಪ್ರಿಲ್ 21ರ ಮಂಗಳವಾರ ದಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಈಶ್ವರ್ ಕುಮಾರ್ ಕಾಂದೂ ಅವರು ಭೇಟಿ ನೀಡಿ, ಪರಿವೀಕ್ಷಣೆ ಮಾಡಿದರು.

ನಾಗಲಾಪುರ ಗ್ರಾಮ ಪಂಚಾಯತಿಯ ಪಿಕಳಿಹಾಳ ಗ್ರಾಮದ ಗುಡ್ಡದಲ್ಲಿರುವ ಹಳೆಯ ಶಿಲಾಯುಗದ ಬಗ್ಗೆ ಪುರಾತತ್ವ ಸಂಶೋಧನೆ ನಡೆಸಿರುವ ಬ್ರಿಟಿಷ್ ಪುರಾತತ್ವ ಶಾಸ್ತ್ರಜ್ಞರು 1960ನೇ ಇಸವಿಯಲ್ಲಿ ಉತ್ಖನನ ನಡೆಸಿದರು. ಇದು ಉತ್ಖನನದಿಂದ ಶಿಲಾಯುಗದ ಅನೇಕ ಕುರುಹುಗಳು ಪತ್ತೆಯಾಗಿವೆ. ಹಾಗೂ ಐತಿಹಾಸಿಕ ಮಹತ್ವ ಈ ಪ್ರದೇಶವು ಹಿಂದಿನ ಮಾನವ ವಸಹಾತುಗಳ ಇತಿಹಾಸಕ್ಕೆ ಸಾಕ್ಷಿಯಾಗಿವೆ ಎಂದರು.

ಭೂದೃಶ್ಯ ಮತ್ತು ಬಂಡೆಯ ಆಶ್ರಯಗಳು ಇತ್ತೀಚಿನವರೆಗೂ ಪುರಾತತ್ವ ಶಾಸ್ತ್ರಜ್ಞ ಸಂಶೋಧನೆಗಳು ಹೆಚ್ಚಿನ ಅಧ್ಯಯನಕ್ಕೆ ಒತ್ತು ನೀಡಿವೆ. ಆದ್ದರಿಂದ ಹಳೆಯ ಶಿಲಾಯುಗದ ಕುರುಹುಗಳನ್ನು ಪುನರುಜ್ಜೀವನಗೊಳಿಸಲು ಮತ್ತು ಸಂರಕ್ಷಿಸಲು ಸಂಬಂಧಿಸಿದ ಇಲಾಖೆಯ ಅಧಿಕಾರಿಗಳು ಕ್ರಮ ವಹಿಸಬೇಕೆಂದರು.

ಇದೇ ಸಂದರ್ಭದಲ್ಲಿ ಲಿಂಗಸುಗೂರು ತಾಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿ ಉಮೇಶ, ಗ್ರಾಮೀಣ ಉದ್ಯೋಗ ಖಾತ್ರಿ ಸಹಾಯಕ ನಿರ್ದೇಶಕ ವೆಂಕಟೇಶ ದೇಸಾಯಿ, ಪಂಚಾಯತ್ ರಾಜ್ ಇಲಾಖೆಯ ಸಹಾಯಕ ನಿರ್ದೇಶಕ ಪಂಪನಗೌಡ, ಪಿಡಿಓ ಬಸವರಾಜ, ಕಾರ್ಯದರ್ಶಿ ಚನ್ನಬಸವ ಸೇರಿದಂತೆ ತಾಂತ್ರಿಕ ಸಂಯೋಜಕರು, ತಾಂತ್ರಿಕ ಸಹಾಯಕರು, ಐಇಸಿ ಸಂಯೋಜಕರು ಹಾಗೂ ಗ್ರಾಮ ಪಂಚಾಯತ್ ಸಿಬ್ಬಂದಿಗಳು ಇದ್ದರು.

# ಏಪ್ರಿಲ್ 24ರಂದು ವರನಟ ಡಾ.ರಾಜ್‌ಕುಮಾರ್ ಜಯಂತಿ

ಧೈರ್ಯದ ದಾರಿ



**ರಾಯಚೂರು:** ಇಲ್ಲಿನ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಹಾಗೂ ಕನ್ನಡ ಸಾಹಿತ್ಯ ಪರಿಷತ್ ರಾಯಚೂರು ಇವರ ಸಂಯುಕ್ತಾಶ್ರಯದಲ್ಲಿ ನಟ ಸಾರ್ವಭೌಮ, ವರನಟ ಡಾ.ರಾಜ್ ಕುಮಾರ್ ಅವರ 97 ಜನ್ಮ ದಿನಾಚರಣೆ ಕಾರ್ಯಕ್ರಮವು ನಗರದ ಕನ್ನಡ ಭವನದಲ್ಲಿ ಏಪ್ರಿಲ್ 24ರ ಬೆಳಿಗ್ಗೆ 11ಗಂಟೆಗೆ ಹಮ್ಮಿಕೊಳ್ಳಲಾಗಿದೆ.

ವೈದ್ಯಕೀಯ ಶಿಕ್ಷಣ ಹಾಗೂ ಕೌಶಲ್ಯಾಭಿವೃದ್ಧಿ ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವರು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ರುದ್ರಪ್ಪ ಪಾಟೀಲ್ ಅವರು ಉದ್ಘಾಟನೆ ನೆರವೇರಿಸುವರು.

ಸಣ್ಣ ನೀರಾವರಿ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರಾದ ಎನ್.ಎಸ್.ಬೋಸರಾಜು ಅವರು ಘನ ಉಪಸ್ಥಿತಿ ವಹಿಸುವರು.

ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಎಸ್.ಶಿವರಾಜ ಪಾಟೀಲ್ ಅವರು ಅಧ್ಯಕ್ಷತೆ ವಹಿಸುವರು. ಮುಖ್ಯ ಅತಿಥಿಗಳಾಗಿ ಕರ್ನಾಟಕ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ರಾಯಚೂರು ಗ್ರಾಮಾಂತರ ಕ್ಷೇತ್ರದ ಶಾಸಕರಾದ ಬಸನಗೌಡ ದದ್ದಲ್, ಕರ್ನಾಟಕ ರಾಜ್ಯ ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿ ಅಧ್ಯಕ್ಷರು ಆಗಿರುವ ಮಸ್ಕಿ ಕ್ಷೇತ್ರದ ಶಾಸಕರಾದ ಆರ್.ಬಸನಗೌಡ ತುರ್ವಿಹಾಳ, ಕರ್ನಾಟಕ ರಾಜ್ಯ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ಅಧ್ಯಕ್ಷರು ಆಗಿರುವ ಸಿಂಧನೂರು ಕ್ಷೇತ್ರದ ಶಾಸಕರಾದ ಹಂಪನಗೌಡ ಬಾದರ್ಲಿ, ಹಟ್ಟಿ ಚಿನ್ನದ ಗಣಿ ನಿಯಮಿತದ ಅಧ್ಯಕ್ಷರು ಆಗಿರುವ ಬೀಳಗಿ ಕ್ಷೇತ್ರದ ಶಾಸಕರಾದ ಜೆ.ಟಿ.ಪಾಟೀಲ್, ರಾಯಚೂರು ಲೋಕಸಭಾ ಸದಸ್ಯರಾದ ಜಿ.ಕುಮಾರ ನಾಯಕ, ಕೊಪ್ಪಳ ಲೋಕಸಭಾ ಸಂಸದರಾದ ಕೆ.ರಾಜಶೇಖರ ಹಿಟ್ನಾಳ, ಮಾನವಿ ಕ್ಷೇತ್ರದ ಶಾಸಕರಾದ ಜಿ.ಹಂಪಯ್ಯ ನಾಯಕ, ಲಿಂಗಸಗೂರು ಕ್ಷೇತ್ರದ ಶಾಸಕರಾದ ಮಾನಪ್ಪ ಡಿ.ವಜ್ಜಲ್, ದೇವದುರ್ಗ ಕ್ಷೇತ್ರದ ಶಾಸಕರಾದ ಕರೆಮ್ಮ ಜಿ.ನಾಯಕ, ವಿಧಾನ ಪರಿಷತ್ ಶಾಸಕರಾದ ಶಶೀಲ್ ಜಿ.ನಮೋಷಿ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ.ಪಾಟೀಲ್, ವಿಧಾನ ಪರಿಷತ್ ಶಾಸಕರಾದ ಶರಣಗೌಡ ಪಾಟೀಲ ಬಯ್ಯಾಪುರ, ಎ.ವಸಂತಕುಮಾರ, ಬಸನಗೌಡ ಬಾದರ್ಲಿ, ಕೃಷಿ ಉತ್ಪನ್ನ ಮಾರುಕಟ್ಟೆ ಸಮಿತಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಗೌಡ, ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷರಾದ ರಾಜಶೇಖರ ರಾಮಸ್ವಾಮಿ, ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪಾಮಯ್ಯ ಮುರಾರಿ, ರಾಯಚೂರು ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷರಾದ ಪವನ್ ಕಿಶೋರ್ ಪಾಟೀಲ್, ಆರ್ಥಿಕ ಇಲಾಖೆಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಹಾಗೂ ರಾಯಚೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ರಿತೇಶಕುಮಾರ ಸಿಂಗ್, ಕಲಬುರಗಿ ವಿಭಾಗದ ಪ್ರಾದೇಶಿಕ ಆಯುಕ್ತರಾದ ಜಹೀರಾ ನಸೀಮ್, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಈಶ್ವರ ಕುಮಾರ್ ಕಾಂದೂ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ., ರಾಯಚೂರು ಮಹಾನಗರ ಪಾಲಿಕೆಯ ಆಯುಕ್ತರಾದ ಜುಬಿನ್ ಮೊಹಪಾತ್ರ ಅವರು ಸೇರಿದಂತೆ ಇತರರು ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ ಎಂದು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯ ಸಹಾಯಕ ನಿರ್ದೇಶಕರಾದ ಡಾ.ಸುರೇಶ ಜಿ. ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಏಪ್ರಿಲ್ ಮಾಹೆಯ ಪಡಿತರ ಧಾನ್ಯಗಳನ್ನು ವಿತರಣೆ: ಜಿಲ್ಲಾಧಿಕಾರಿ ನಿತೀಶ್ ಕೆ.

ಧೈರ್ಯದ ದಾರಿ



**ರಾಯಚೂರು:** ಜಿಲ್ಲಾ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆಯಿಂದ 2026ರ ಏಪ್ರಿಲ್ ಮಾಹೆಯ ಪಡಿತರ ಧಾನ್ಯಗಳನ್ನು ವಿತರಣೆ ಮಾಡಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳಾದ ನಿತೀಶ್ ಕೆ. ಅವರು ತಿಳಿಸಿದ್ದಾರೆ.

ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ರಾಯಚೂರು ಜಿಲ್ಲೆಯ ಕೇಂದ್ರ ವ್ಯಾಪ್ತಿಯ ಪ್ರತಿ ಅಂತ್ಯೋದಯ (ಎಎವೈ) ಪಡಿತರ ಚೀಟಿಗೆ 35 ಕೆ.ಜಿ ಸಾರವರ್ಧಿತ ಅಕ್ಕಿ ಹಾಗೂ ಕೇಂದ್ರ ವ್ಯಾಪ್ತಿಯ ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯಲ್ಲಿನ ಪ್ರತಿ ಫಲಾನುಭವಿಗೆ 05 ಕೆ.ಜಿ ಸಾರವರ್ಧಿತ ಅಕ್ಕಿ ಇದರ ಜೊತೆಗೆ ರಾಜ್ಯ ಸರ್ಕಾರದ ಅನ್ನಭಾಗ್ಯ ಯೋಜನೆಯಡಿಯಲ್ಲಿ ಸರ್ಕಾರದ ಮಾರ್ಗಸೂಚಿಯಂತೆ ಏಕ ಸದಸ್ಯ, ದ್ವಿ-ಸದಸ್ಯ ಮತ್ತು ತ್ರಿ-ಸದಸ್ಯ ಎಎವೈ ಪಡಿತರ ಚೀಟಿಗಳನ್ನು ಹೊರತುಪಡಿಸಿ ನಾಲ್ಕು ಮತ್ತು ನಾಲ್ಕಕಿಂತ ಹೆಚ್ಚಿನ ಸದಸ್ಯರುಳ್ಳ ಕೇಂದ್ರ ಹಾಗೂ ರಾಜ್ಯ ವ್ಯಾಪ್ತಿಯ ಅಂತ್ಯೋದಯ (ಎಎವೈ) ಮತ್ತು ಪಿ.ಹೆಚ್.ಹೆಚ್ (ಬಿಪಿಎಲ್) ಪಡಿತರ ಚೀಟಿಯ ಪ್ರತಿ ಫಲಾನುಭವಿಗೆ ಹೆಚ್ಚುವರಿಯಾಗಿ 05 ಕೆ.ಜಿ ಅಕ್ಕಿಯನ್ನು ಉಚಿತವಾಗಿ ವಿತರಿಸಲಾಗುವುದು.

ಒಂದು ರಾಷ್ಟ್ರ ಒಂದು ಪಡಿತರ ಚೀಟಿ(ಅಂತರ್ ರಾಜ್ಯ / ಅಂತರ್ ಜಿಲ್ಲೆ) ಪೋರ್ಟೆಬಿಲಿಟಿ ಜಾರಿಯಲ್ಲಿರುವುದರಿಂದ ಯಾವುದೇ ರಾಜ್ಯದ ಪಡಿತರ ಚೀಟಿದಾರರು ಯಾವುದೇ ವರ್ಗದ ಪಡಿತರ ಚೀಟಿದಾರರು ಯಾವುದೇ ನ್ಯಾಯಬೆಲೆ ಅಂಗಡಿಯಲ್ಲಿ ಪಡಿತರವನ್ನು ಪಡೆಯಲು ಅವಕಾಶ ಕಲ್ಪಿಸಲಾಗಿದೆ. ಯಾವುದೇ ನ್ಯಾಯಬೆಲೆ ಅಂಗಡಿಕಾರರು ಕಡಿಮೆ ಪ್ರಮಾಣದ ಪಡಿತರವನ್ನು ವಿತರಣೆ ಮಾಡಿದ್ದಲ್ಲಿ, ಹಣ ಕೇಳಿದ್ದಲ್ಲಿ ಮತ್ತು ಇತರೆ ದೂರುಗಳಿಗೆ ನಿಶುಲ್ಕ ದೂರವಾಣಿ ಸಂಖ್ಯೆ 1967ಗೆ ಹಾಗೂ ತಾಲ್ಲೂಕಿನಲ್ಲಿರುವ ತಹಶೀಲ್ದಾರರ ಕಚೇರಿಗೆ ಅಥವಾ ಜಿಲ್ಲೆಯ ಉಪನಿರ್ದೇಶಕರ ಕಚೇರಿಗೆ ದೂರನ್ನು ಸಲ್ಲಿಸಬಹುದಾಗಿದೆ.

ಈ ಯೋಜನೆಯಡಿ ವಿತರಿಸಲಾದ ಆಹಾರ ಧಾನ್ಯಗಳನ್ನು ಹಣಕ್ಕಾಗಿ ಪಡಿತರ ಚೀಟಿದಾರರು ಮಾರಾಟ ಮಾಡುವುದಾಗಲಿ ಅಥವಾ ಸಂಗ್ರಹಣೆ ಮಾಡುವುದು ಕಂಡುಬಂದಲ್ಲಿ ಅಂತಹ ಪಡಿತರ ಚೀಟಿದಾರರಿಗೆ ವಿತರಿಸಲಾದ ಆಹಾರ ಧಾನ್ಯಗಳಿಗೆ ಮುಕ್ತ ಮಾರುಕಟ್ಟೆ ದರಕ್ಕೆ ದಂಡ ವಿಧಿಸಲಾಗುವುದು ಮತ್ತು ಈ ಪಡಿತರ ಚೀಟಿಯುನ್ನು ಆರು ತಿಂಗಳ ಅವಧಿಗೆ ಅಮಾನತ್ತುಗೊಳಿಸಲಾವುದೆಂದು ಜಿಲ್ಲಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಶಂಕರಾಚಾರ್ಯರ ಕಾರ್ಯ ಇಂದಿಗೂ ಶಾಶ್ವತ: ಶಾಸಕ ಶಿವರಾಜ ಪಾಟೀಲ್




ಧೈರ್ಯದ ದಾರಿ

**ರಾಯಚೂರು:** ಆದಿ ಶಂಕರಾಚಾರ್ಯರು ಸನಾತನ ಧರ್ಮ ರಕ್ಷಣೆಗಾಗಿ ಅವರು ಮಾಡಿದ ಮಹಾನ್ ಕಾರ್ಯ ಇಂದಿಗೂ ಶಾಶ್ವತವಾಗಿದೆ. ಸಹಸ್ರಾರು ವರ್ಷಗಳ ನಂತರವು ಅವರು ಮಾಡಿದ ಕಾರ್ಯ ಮಹತ್ವದಾಗಿದೆ ಎಂದು ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್.ಪಾಟೀಲ್ ಅವರು ಹೇಳಿದರು.

ಏಪ್ರಿಲ್ 21ರ ಮಂಗಳವಾರ ದಂದು ಸಂಜೆ ನಗರದ ಗಾಜಗಾರಪೇಟೆಯ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಜಿಲ್ಲಾಡಳಿ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನಾವು ಹಿಂದೂ ಎಂದು ಹೇಳಿಕೊಳ್ಳಲು ಶಂಕರಾಚಾರ್ಯರು ಮೂಲಕಾರಣ ಆಗಿದ್ದಾರೆ. ರಾಯಚೂರಿನ ಶೃಂಗೇರಿ ಶಂಕರ ಮಠಕ್ಕೆ ಬೇಕಾಗುವ ಅಗತ್ಯ ಸೌಕರ್ಯಗಳನ್ನು ಒದಗಿಸಲು ಶ್ರಮಿಸಲಾಗುವುದು. ಈಗಾಗಲೇ ಸಮಾಜದ ಆನೇಕ ಅಭಿವೃದ್ಧಿ ಕೆಲಸ ಕಾರ್ಯವನ್ನು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಅತ್ಯುತ್ತಮ ಕೆಲಸ ಕಾರ್ಯಗಳನ್ನು 2ನೇಪುಟಕ್ಕೆ►

ಮೊದಲನೇ ಪುಟದಿಂದ

# ಶಂಕರಾಚಾರ್ಯರ ಕಾರ್ಯ ಇಂದಿಗೂ ಶಾಶ್ವತ: ಶಾಸಕ ಶಿವರಾಜ ಪಾಟೀಲ್

ಮಾಡಲಾಗುತ್ತದೆ ಎಂದರು. ಉಪನ್ಯಾಸಕರಾಗಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರಿನ ಧಾರ್ಮಿಕ ಉಪನ್ಯಾಸಕರು ಹಾಗೂ ಪುರೋಹಿತರಾದ ಸುಪ್ರತೀಕ ಭಟ್ ಅವರು ಮಾತನಾಡಿ, ಭಾರತದ **ರಾಯಚೂರು:** ಆದಿ ಶಂಕರಾಚಾರ್ಯರು ಸನಾತನ ಧರ್ಮ ರಕ್ಷಣೆಗಾಗಿ ಅವರು ಮಾಡಿದ ಮಹಾನ್ ಕಾರ್ಯ ಇಂದಿಗೂ ಶಾಶ್ವತವಾಗಿದೆ. ಸಹಸ್ರಾರು ವರ್ಷಗಳ ನಂತರವು ಅವರು ಮಾಡಿದ ಕಾರ್ಯ ಮಹತ್ವದಾಗಿದೆ ಎಂದು ರಾಯಚೂರು ನಗರ ಕ್ಷೇತ್ರದ ಶಾಸಕರಾದ ಡಾ.ಶಿವರಾಜ ಎಸ್.ಪಾಟೀಲ್ ಅವರು ಹೇಳಿದರು.

ಏಪ್ರಿಲ್ 21ರ ಮಂಗಳವಾರ ದಂದು ಸಂಜೆ ನಗರದ ಗಾಜಗಾರಪೇಟೆಯ ಶೃಂಗೇರಿ ಶಂಕರ ಮಠದ ಆವರಣದಲ್ಲಿ ಜಿಲ್ಲಾಡಳಿ, ಜಿಲ್ಲಾ ಪಂಚಾಯತ್, ರಾಯಚೂರು ಮಹಾನಗರ ಪಾಲಿಕೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇವರ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ಶ್ರೀ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ನಾವು ಹಿಂದೂ ಎಂದು ಹೇಳಿಕೊಳ್ಳಲು ಶಂಕರಾಚಾರ್ಯರು ಮೂಲಕಾರಣ ಆಗಿದ್ದಾರೆ. ರಾಯಚೂರಿನ ಶೃಂಗೇರಿ ಶಂಕರ ಮಠಕ್ಕೆ ಬೇಕಾಗುವ ಅಗತ್ಯ ಸೌಕರ್ಯಗಳನ್ನು ಒದಗಿಸಲು ಶ್ರಮಿಸಲಾಗುವುದು. ಈಗಾಗಲೇ ಸಮಾಜದ ಆನೇಕ ಅಭಿವೃದ್ಧಿ ಕೆಲಸ ಕಾರ್ಯವನ್ನು ಮಾಡಲಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಅತ್ಯುತ್ತಮ ಕೆಲಸ ಕಾರ್ಯಗಳನ್ನು ಮಾಡಲಾಗುತ್ತದೆ ಎಂದರು.ಉಪನ್ಯಾಸಕರಾಗಿ ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರಿನ ಧಾರ್ಮಿಕ ಉಪನ್ಯಾಸಕರು ಹಾಗೂ ಪುರೋಹಿತರಾದ ಸುಪ್ರತೀಕ ಭಟ್ ಅವರು ಮಾತನಾಡಿ, ಭಾರತದ

ಶ್ರೇಷ್ಠ ಆಧ್ಯಾತ್ಮಿಕ ನಾಯಕ ತತ್ವಜ್ಞಾನಿಗಳಲ್ಲಿ ಆದಿ ಶಂಕರಾಚಾರ್ಯರು ಒಬ್ಬರು. ಅದ್ವೈತ ವೇದಾಂತದ ಅಡಿಪಾಯವನ್ನು ಹಾಕಿ, ಸಾಂಸ್ಕೃತಿಕ ಮತ್ತು ಧಾರ್ಮಿಕ ಅವನತಿಯ ಸಮಯದಲ್ಲಿ ಹಿಂದೂ ಧರ್ಮವನ್ನು ಪುನರುಜ್ಜೀವನಗೊಳಿಸುವಲ್ಲಿ ನಿರ್ಣಾಯಕ ಪಾತ್ರ ವಹಿಸಿದ್ದರು ಎಂದು ಹೇಳಿದರು.ಇಂದಿನ ಕೇರಳದ ಕಾಲಡಿಯಲ್ಲಿ ಜನಿಸಿದ್ದ ಆದಿ ಶಂಕರಾಚಾರ್ಯರು, ಭಾರತೀಯ ತತ್ವಶಾಸ್ತ್ರದ ಶ್ರೇಷ್ಠ ವ್ಯಕ್ತಿಯಲ್ಲಿ ಒಬ್ಬರು. ಶಂಕರಾಚಾರ್ಯರು ಮೂರು ಸಲ ಕಾಲ್ನಡಿಗೆಯಲ್ಲಿ ದೇಶವನ್ನು ಸುತ್ತಿದ್ದರು ಎಂದರು. ಅದ್ವೈತ ಸಿದ್ಧಾಂತದ ಮೂಲಕ ಧರ್ಮದ ಹೆಸರಿನಲ್ಲಿ ಹರಡುತ್ತಿದ್ದ ತಪ್ಪು ಕಲ್ಪನೆಗಳನ್ನು ಹೋಗಲಾಡಿಸುವ ಕೆಲಸ ಮಾಡಿದ ಶಂಕರಾಚಾರ್ಯರು, ಆದ್ಯ ಗುರುವಾಗಿ ಪೂಜಿತರಾದರು ಎಂದರು.ಕಾರ್ಯಕ್ರಮಕ್ಕೂ ಮೊದಲು ಗಾಜಗಾರಪೇಟೆಯ ಶೃಂಗೇರಿ ಶಂಕರ ಮಠದಿಂದ ನಗರದ ಪ್ರಮುಖ ರಸ್ತೆಗಳಲ್ಲಿ ಶಂಕರಾಚಾರ್ಯರ ಭಾವಚಿತ್ರದ ಮೆರವಣಿಗೆ ಜರುಗಿತು.

ಇದೇ ಸಂದರ್ಭದಲ್ಲಿ ಜಿಲ್ಲಾಧಿಕಾರಿಗಳ ಕಚೇರಿಯ ತಹಶಿಲ್ದಾರ್ ಪರಶುರಾಮ, ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಧ್ಯಾಪಕ ಡಾ.ಪ್ರಾಣೇಶ್ ಕುಲಕರ್ಣಿ, ಮಹಾನಗರ ಪಾಲಿಕೆಯ ಕಚೇರಿ ವ್ಯವಸ್ಥಾಪಕ ರಾಜು, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವ್ಯವಸ್ಥಾಪಕ, ಶೈಲಜಾ ಆರ್.ಕುಲಕರ್ಣಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ದ್ರಾಕ್ಷಿ, ಕನ್ನಡ ಸಾಹಿತ್ಯ ಪರಿಷತ್ತಿನ ಜಿಲ್ಲಾ ಸಹ ಕಾರ್ಯದರ್ಶಿ ದಂಡಪ್ಪ ಬಿರಾದಾರ್, ಸಮಾಜದ ಮುಖಂಡರಾದ ಹನುಮಂತ ರಾವ್, ಕೃಷ್ಣಮೂರ್ತಿ ಹೆಬಸೂರು, ಈಶ್ವರ ಹೆಗ್ಗಡೆ, ಶಿವಪ್ರಸಾದ್, ವಸಂತ ರಾವ್, ರಮೇಶ ಕುಲಕರ್ಣಿ, ಜಗನ್ನಾಥ ದೇಸಾಯಿ, ಶಾರದಾ ಮಹಿಳಾ ಮಂಡಳಿ, ಆದಿ ಶಂಕರಾಚಾರ್ಯ ಮಹಿಳಾ ಮಂಡಳಿಯ ಸದಸ್ಯರು ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು, ಸಿಬ್ಬಂದಿಗಳು ಹಾಗೂ ಸಮಾಜದ ಮುಖಂಡರು ಕಾರ್ಯಕ್ರಮದಲ್ಲಿ ಇದ್ದರು.

# ಕದಳಿ ವೇದಿಕೆಯಿಂದ ಬಸವ ಜಯಂತಿ ಆಚರಣೆ : ಶಕಾಪುರ ಶ್ರೀಗಳಿಗೆ ಸನ್ಮಾನ



**ಜೇವರ್ಗಿ : ಏ.22:**ತಾಲೂಕಿನ ಬಸವೇಶ್ವರ ನಗರದ ಕದಳಿವನ ವೇದಿಕೆ ವತಿಯಿಂದ 893ನೇ ಬಸವ ಜಯಂತಿ ಪ್ರಯುಕ್ತ ಶಕಾಪುರ ತಪೋವನದ ಪೂಜ್ಯ ಶ್ರೀ ಡಾ. ಸಿದ್ದರಾಮ ಶಿವಾಚಾರ್ಯರಿಗೆ ಗೌರವ ಸನ್ಮಾನ ಕಾರ್ಯಕ್ರಮವನ್ನು ವಿಜೃಂಭಣೆಯಿಂದ ಆಯೋಜಿಸಲಾಯಿತು.

ಕಾರ್ಯಕ್ರಮವು ಪ್ರಾರ್ಥನಾ ಗೀತೆಯೊಂದಿಗೆ ಆರಂಭಗೊಂಡಿತು. ಡಾ. ಹಣಮಂತ್ರಾಯ ರಾಂಪುರೆ ಅವರು ಪ್ರಾಸ್ತಾವಿಕವಾಗಿ ಮಾತನಾಡಿ "ಕಳಬೇಡ, ಕೊಲಬೇಡ" ಎಂಬ ಬಸವಣ್ಣನವರ ವಚನಗಳ ಸಾರಾಂಶವನ್ನು ವಿವರಿಸಿದರು.

ನಂತರ ಕೃಷಿ ರತ್ನ ಡಾ. ಸಿದ್ದರಾಮ ಶಿವಾಚಾರ್ಯರು ಸುಮಾರು 1200 ಭಕ್ತರನ್ನು ಒಳಗೊಂಡ ವಾರಪೂರ್ತಿ ತೀರ್ಥಯಾತ್ರೆಯನ್ನು ಯಶಸ್ವಿಯಾಗಿ ನಡೆಸಿದ ಹಿನ್ನೆಲೆಯಲ್ಲಿ, ಬಸವ ಜಯಂತಿಯ ಅಂಗವಾಗಿ ಶಕಾಪುರ ಶ್ರೀಗಳನ್ನು ಸನ್ಮಾನಿಸಲಾಯಿತು.

ಸನ್ಮಾನ ಸ್ವೀಕರಿಸಿದ ಶ್ರೀಗಳು ತಮಿಳುನಾಡಿನ ವಿವಿಧ ತೀರ್ಥಕ್ಷೇತ್ರಗಳ ಯಾತ್ರಾ ಅನುಭವಗಳನ್ನು ಹಂಚಿಕೊಂಡು ಭಕ್ತರಿಗೆ ಆಶೀರ್ವಚನ ನೀಡಿದರು.ಈ ಸಂದರ್ಭದಲ್ಲಿ ಕದಳಿವನ ವೇದಿಕೆಯ ಮೈದಾನದಲ್ಲಿ ನಿರ್ಮಾಣವಾಗಲಿರುವ ಕಟ್ಟಡಕ್ಕೆ ಶಕಾಪುರ ಶ್ರೀಗಳು ಭೂಮಿ ಪೂಜೆ ನೆರವೇರಿಸಿದರು.

ಕಾರ್ಯಕ್ರಮದ ನಿರೂಪಣೆಯನ್ನು ಪತ್ರಕರ್ತ ಸುರೇಶ್ ಕುಮಾರ್ ಹಿರೇಮಠ ನಡೆಸಿದರು. ಯುವ ಹೋರಾಟಗಾರ ಸುರೇಶ್ ಪಾಟೀಲ್ ನೇದಲಗಿ ತೀರ್ಥಯಾತ್ರೆಯ ಕುರಿತು ವಿವರಿಸಿದರು ಹಾಗೂ ವಂದನಾರ್ಪಣೆ ಸಲ್ಲಿಸಿದರು.

ಈ ಸಂದರ್ಭದಲ್ಲಿ ಬಸವೇಶ್ವರ ನಗರದ ನಿವಾಸಿಗಳಾದ ಕೇಶವರಾವ್ ಹಚ್ಚಡ್,ಮಧುವೀರಯ್ಯ ಸ್ವಾಮಿ ಸ್ಥಾವರ ಮಠ,ಚಂದ್ರಶೇಖರ ದೇವತ್ಕಲ್, ಮಲ್ಲಯ್ಯ ಸ್ವಾಮಿ ಹಿರೇಮಠ ನೆಲೋಗಿ,ಶಾಮರಾವ್ ಪಾಟೀಲ್ ಕೋಳಕೂರ್,ಸಂಗಯ್ಯ ಸ್ವಾಮಿ ಹಿರೇಮಠ,ಎಸ್ ಎಸ್ ಮಠಪತಿ ನಿವೃತ್ತ ತಹಶೀಲ್ದಾರರು ಜೇವರ್ಗಿ,ಡಾ: ಪ್ರಶಾಂತ ಪಾಟೀಲ್,ಹಣಮಂತ್ರಾಯ ಹಾಗೂ

ಕಾರ್ಯಕ್ರಮದಲ್ಲಿ ಅಕ್ಕಮಹಾದೇವಿ ಮಹಿಳಾ ಕದಳಿವನ ವೇದಿಕೆಯ ಪದಾಧಿಕಾರಿಗಳಾದ ಕದಳಿ ವೇದಿಕೆ ಮಹಿಳಾ ಜೇವರ್ಗಿ ನಗರ ಘಟಕದ ಅಧ್ಯಕ್ಷರಾದ ಶಾಂತಾಬಾಯಿ ಶಾಮರಾವ್ ಪಾಟೀಲ್, ಮಹಾಪೋಷಕರುಗಳಾದ

ಶ್ರೀಮತಿ ಬಸಮ್ಮ ಬಸವರಾಜ್ ಮಾಲಿ ಪಾಟೀಲ್, ಸುಮಿತ್ರ ಬಿರಾಳ, ಶ್ರೀಮತಿ ಶೀಲಮ್ಮ ಮಲ್ಲಿಕಾರ್ಜುನ್ ಹಿರೇಮಠ ನೆಲೋಗಿ,ರಾಚಮ್ಮ ಮಧುವೀರಯ್ಯ ಸ್ಥಾವರ ಮಠ,

ಗೌರವಾಧ್ಯಕ್ಷರು ಮಹಾದೇವಿ ಸಂಗಯ್ಯ ಹಿರೇಮಠ, ಲಲಿತಾಬಾಯಿ ಕೇಶವರಾವ್ ಹಚ್ಚದ್ ,

ಹಿರಿಯ ಉಪಾಧ್ಯಕ್ಷರು: ಶ್ರೀಮತಿ ಬಸವರಾಜೇಶ್ವರಿ ಸಿದ್ದಯ್ಯ ಹಿರೇಮಠ,ಉಪಾಧ್ಯಕ್ಷರು: ಶರಣಮ್ಮ ಪಡಶೆಟ್ಟಿ

ಲಕ್ಷ್ಮೀ ಎಸ್ ಕೆ ಬಿರಾದಾರ, ಕೋಶಾಧ್ಯಕ್ಷರು ಭೀಮಬಾಯಿ ಎಲ್ ಪಾಟೀಲ್, ಪ್ರಧಾನ ಕಾರ್ಯದರ್ಶಿ ಶ್ರೀಮತಿ ವೈಶಾಲಿ ಪ್ರಕಾಶ್ ಜೇವರ್ಗಿ,ಕಾರ್ಯದರ್ಶಿ ಶ್ರೀಮತಿ ರೇಣುಕಾ ಪ್ರಶಾಂತ್ ಪಾಟೀಲ್,ಸಹ ಕಾರ್ಯದರ್ಶಿ ಶ್ರೀಮತಿ ದಾನೇಶ್ವರಿ ಎ ಸಿ ಹರವಾಳ, ಶ್ರೀಮತಿ ರೂಪ ಹನುಮಂತರಾಯ, ಯುವ ಘಟಕ ಅಧ್ಯಕ್ಷರು

ಅನಿತಾ ವೀರೇಶ ಸಜ್ಜನ್, ಗೌರವ ಸಲಹಾ ಸಮಿತಿ ಸದಸ್ಯರು ಲಕ್ಷ್ಮೀಬಾಯಿ ಕರ್ಜಗಿ, ನೀಲಮ್ಮ ಆರಾಧ್ಯ ಮಠ, ಕನ್ಯಾ ಬಾಯಿ ಹೂಗಾರ, ರಂಜನಾಬಾಯಿ ಬಿರಾದರ್, ಮಾಲಾ ವಿಶ್ವನಾಥ್ ಮದುರಿ, ಶ್ರೀಮತಿ ಪಾರ್ವತಿ ಅಶೋಕ್ ಸನಗುಂದಿ, ಶ್ರೀಮತಿ ಸಿದ್ದಮ್ಮ ಚಂದ್ರಶೇಖರ್ ದೇವತ್ಕಲ್, ಸರೂಬಾಯಿ ರಾಹುಲ್, ಭಾರತಿ ಪಡಶೆಟ್ಟಿ, ಶ್ರೀಮತಿ ಈರಮ್ಮ ಸಿದ್ದು ಗ್ಯಾರೇಜ್,

ಶ್ರೀಮತಿ ಶಾಂತಾಬಾಯಿ ಶಾಮರಾವ್ ಪಾಟೀಲ್, ಶ್ರೀಮತಿ ಶಾಂತಾಬಾಯಿ ವಿಜಯ್ ಕುಮಾರ್ ಸುಬೇದಾರ್, ಶ್ರೀಮತಿ ಶ್ರೀದೇವಿ ರಾಜು ಪೊಲೀಸ್, ಶ್ರೀಮತಿ ಸುಶೀಲಾಬಾಯಿ ಶಂಕರ್, ಶ್ರೀಮತಿ ರೇಣುಕಾ ನಿಂಗಣ್ಣ,

ಶ್ರೀಮತಿ ಸುವರ್ಣ ಗುಂಡಯ್ಯ ಸ್ವಾಮಿ ನೆಲೋಗಿ, ಶ್ರೀಮತಿ ಜ್ಯೋತಿ ಸಂತೋಷ್ ದೊಡ್ಮನಿ, ಶ್ರೀಮತಿ ರೇಖಾ ಶುಭಾಸ್ ಹಳ್ಳಿ, ಶ್ರೀಮತಿ ಕಾಶಿಬಾಯಿ ಗುರಣ್ಣ, ಲಕ್ಷ್ಮಿ ಹನುಮಂತರಾಯ ಬಿರಾಳ, ಬಸವರಾಜೇಶ್ವರಿ ವಿಭೂತಿ, ಸುಜಾತಾ ಧರ್ಮರಾಯ ಅದೇ ರೀತಿಯಾಗಿ ಸದಸ್ಯರು, ಕನ್ನಡ ಸಾಹಿತ್ಯ ಪರಿಷತ್ ಪದಾಧಿಕಾರಿಗಳು, ದಲಿತ ಸಮಾಜದ ಮುಖಂಡರು ಸೇರಿದಂತೆ ಅನೇಕ ಬಸವಾಭಿಮಾನಿಗಳು ಉಪಸ್ಥಿತರಿದ್ದರು.

## I. ಮೈಸೂರು ಮುಜಾಫರ್‌ಪುರ ನಡುವೆ ಬೇಸಿಗೆ ವಿಶೇಷ ರೈಲು ಸಂಚಾರ

ಬೇಸಿಗೆ ರಜೆಯ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆ ನಿಯಂತ್ರಿಸಲು, ನೈಋತ್ಯ ರೈಲ್ವೆಯು ಮೈಸೂರು ಮತ್ತು ಮುಜಾಫರ್‌ಪುರ ನಡುವೆ ಒಂದು ಟ್ರಿಪ್ಪಾಯ್ದಿರಿಸದ 'ವಿಶೇಷ ರೈಲು ಓಡಿಸಲಿದೆ.

ರೈಲುಸಂಖ್ಯೆ 06243 ಮೈಸೂರು ಮುಜಾಫರ್ ಪುರ 'ರೈಲುಏಪ್ರಿಲ್ 22, 2026ರ ಬುಧವಾರಬೆಳಿಗ್ಗೆ 10:05ಕ್ಕೆ ಮೈಸೂರಿನಿಂದಹೊರಟು, ಶುಕ್ರವಾರ ರಾತ್ರಿ 07:45ಕ್ಕೆ ಮುಜಾಫರ್‌ಪುರವನ್ನುತಲುಪಲಿದೆ. ಮರು ಪ್ರಯಾಣದಲ್ಲಿ, ರೈಲುಸಂಖ್ಯೆ 06244 ಮುಜಾಫರ್‌ಪುರ ಮೈಸೂರು ರೈಲು ಏಪ್ರಿಲ್ 25, 2026ರ ಶನಿವಾರರಾತ್ರಿ 10:45ಕ್ಕೆ ಮುಜಾಫರ್‌ಪುರದಿಂದ ಹೊರಟು, ಮಂಗಳವಾರ 'ಬೆಳಿಗ್ಗೆ 07:45ಕ್ಕೆ ಮೈಸೂರನ್ನು ತಲುಪಲಿದೆ.

ಈ ವಿಶೇಷ ರೈಲು ಮಂಡ್ಯ, ಕೆಂಗೇರಿ, ಕೆಎಸ್‌ಆರ್ ಬೆಂಗಳೂರು, ಕೃಷ್ಣರಾಜಪುರಂ, ಬಂಗಾರಪೇಟೆ, ಜೋಲಾರ್‌ಪೇಟೆ, ಕಾಟ್ಪಾಡಿ, ರೇಣಿಗುಂಟಾ, ಗೂಡೂರು, ನೆಲ್ಲೂರು, ಒಂಗೋಲ್, ವಿಜಯವಾಡ, ರಾಜಮಂಡ್ರಿ, ಕೊಟ್ಟವಲಸ, ವಿಜಯನಗರಂ, ಶ್ರೀಕಾಕುಳಂರೋಡ್, ಪಲಾಸ, ಬ್ರಹ್ಮಪುರ, ಖುರ್ದಾರೋಡ್, ಭುವನೇಶ್ವರ, ಕಟಕ್, ಭದ್ರಕ್, ಬಾಲೇಶ್ವರ, ಖರಗ್‌ಪುರ, ದನಕುಣಿ, ಬರ್ಧಮಾನ್, ಬೋಲ್ಪುರ್ (ಶಾಂತಿನಿಕೇತನ), ರಾಂಪುರಹಟ್, ಮಾಲ್ದಾಟೌನ್, ಕಟಿಹಾರ್, ನೌಗಚಿಯಾ, ಖಗರಿಯಾ, ಬೇಗುಸರಾಯ್, ಬರೌನಿ ಮತ್ತು ಸಮಸ್ತಿಪುರ ನಿಲ್ದಾಣಗಳಲ್ಲಿ ನಿಲುಗಡೆ ಹೊಂದಿರಲಿದೆ.

ಈ ರೈಲುಒಟ್ಟು 18 ಸಾಮಾನ್ಯವರ್ಗದ 'ಬೋಗಿಗಳು ಮತ್ತು ದಿವ್ಯಾಂಗ ಸ್ನೇಹಿ ಕಂಪಾರ್ಟ್‌ಮೆಂಟ್‌ಳಗೊಂಡಂತೆ 2 ಎಸ್‌ಎಲ್‌ಆರ್ (ಸೆಕೆಂಡ್ಲಾಸ್ಲಗೇಜ್ಮತ್ತುಬ್ರೇಕ್ವ್ಯಾನ್) ಬೋಗಿಗಳನ್ನುಒಳಗೊಂಡಿರಲಿದೆ.

## II ತಿದ್ದುಪಡಿ ಪ್ರಕಟಣೆ

ದಿನಾಂಕ 20.04.2026ರ ಪತ್ರಿಕಾ ಪ್ರಕಟಣೆ ಸಂಖ್ಯೆ 30ಕ್ಕೆ ಸಂಬಂಧಿಸಿದಂತೆ ಸಣ್ಣ ತಿದ್ದುಪಡಿ ಮಾಡಲಾಗಿದೆ.ರೈಲುಸಂಖ್ಯೆ 07325/07326 ಎಸ್‌ಎಸ್‌ಎಸ್ಹುಬ್ಬಳ್ಳಿ ನ್ಯೂಟಿನ್ಸುಕಿಯಾ ಎಸ್‌ಎಸ್‌ಎಸ್ಹು ಬ್ಬಳ್ಳಿಬೇಸಿಗೆ 'ವಿಶೇಷರೈಲಿನ ಮಾರ್ಗ ಮಧ್ಯದನಿಲುಗಡ 'ಯನ್ನು ಅಚಾತುರ್ಯದಿಂದ 'ದರ್ಭಾಂಗ (DBG) ಎಂದುನಮೂದಿಸಲಾಗಿತ್ತು. ಆದರೆ, ಇದರ ಸರಿಯಾದ ನಿಲ್ದಾಣವು ಡಿಬ್ರುಗಢ್ (DBRG) ಆಗಿರುತ್ತದೆ.

# ಆದಿ ಶಂಕರಾಚಾರ್ಯರು ಜಗತ್ತಿಗೆ ಮಾದರಿ



**ಮೈಸೂರು: ಏ.22:–** ಅದ್ವೈತ ಸಿದ್ಧಾಂತದ ಮೂಲಕ ಜಗತ್ತಿಗೆ ಮಾದರಿಯಾದವರು ಆದಿ ಶಂಕರಾಚಾರ್ಯರು ಎಂದು ಶಾಸಕ ಟಿ.ಎಸ್.ಶ್ರೀವತ್ಸ ಹೇಳಿದರು.ಜಿಲ್ಲಾಡಳಿತ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮಹಾನಗರ ಪಾಲಿಕೆ ಹಾಗೂ ಶಂಕರಾಚಾರ್ಯ ಜಯಂತೋತ್ಸವ ಸಮಿತಿ ವತಿಯಿಂದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಆಯೋಜಿಸಲಾಗಿದ್ದ ಶಂಕರಚಾರ್ಯ ಜಯಂತಿ ಉದ್ಘಾಟಿಸಿ ಮಾತನಾಡಿದ ಅವರು, ಶಂಕರಾಚಾರ್ಯರು ಅವರ ತಂದೆ–ತಾಯಿಗಳ ಸುದೀರ್ಘ ತಪಸ್ಸಿನ ಫಲವಾಗಿ ಜನಿಸಿದ ಅದ್ಭುತ ಬಾಲಕ. ದೇವರ ಅನುಗ್ರಹದಿಂದ ಜನಿಸಿದ ಬಾಲ ಶಿವ ಎಂದರೆ ಅತಿಶಯೋಕ್ತಿಯಾಗಲಾರದು ಎಂದರು.ಶಂಕರಾಚಾರ್ಯರು ಇಡೀ ಭಾರತವನ್ನು ಕಾಲ್ನಡಿಗೆಯಲ್ಲೇ ಸಂಚರಿಸಿ, ಅದ್ವೈತ ಸಿದ್ಧಾಂತ ಪ್ರತಿಪಾದಿಸಿದ ಅನೇಕ ಕಥೆಗಳನ್ನು ನಾವು ಕೇಳಿದ್ದೇವೆ. ಅವರು ಮುನ್ನೂರಕ್ಕೂ ಹೆಚ್ಚು ಶ್ಲೋಕಗಳನ್ನು ರಚಿಸಿದ್ದು, ಅವುಗಳಲ್ಲಿ ಭಜಗೋವಿಂದಂ ಇದು ಅತ್ಯಂತ ಶ್ರೇಷ್ಠವಾದ ಶ್ಲೋಕ ಎಂದರು.ಶಂಕರಾಚಾರ್ಯರು ಭಾರತದ ನಾಲ್ಕು ದಿಕ್ಕುಗಳಲ್ಲಿ ಚತುರ್ದಾಮ ಪೀಠಗಳನ್ನು (ಮಠಗಳನ್ನು) ಸ್ಥಾಪಿಸಿದರು. ಕೇವಲ 32 ವರ್ಷಗಳ ಅಲ್ಪಾಯುಷ್ಯದಲ್ಲೇ, ಮುಂಬರುವ ಹಲವಾರು ಪೀಳಿಗೆಗಳು ನೆನಪಿನಲ್ಲಿಟ್ಟುಕೊಳ್ಳುವಂತಹ ಅಭೂತಪೂರ್ವ ಸಾಧನೆ ಮಾಡಿ ಜಗತ್ತಿಗೆ ಮಾದರಿಯಾಗಿದ್ದಾರೆ ಎಂದರು.

ಶ್ರೀ ರಾಮಕೃಷ್ಣ ಆಶ್ರಮದ ಕನ್ನಡ ಪುಸ್ತಕ ಪ್ರಕಟಣಾ ವಿಭಾಗದ ಸ್ವಾಮಿ ಸರ್ವಜಯಾನಂದಜಿ ಸಾನಿಧ್ಯ ವಹಿಸಿ ಮಾತನಾಡಿ, ಶಂಕರರು ತಾವು ಜೀವಿಸಿದ ಅಲ್ಪ ಕಾಲಾವಧಿಯಲ್ಲಿ ಅಪಾರ ಸಾಧನೆ ಮಾಡಿದ್ದಾರೆ. ಶಂಕರರ ಅದ್ವೈತ ತತ್ವ ಪ್ರತಿಪಾದಿಸಿದ್ದರು, ಅದನ್ನು ಸಾಮಾನ್ಯ ಜನರ ಜೀವನದಲ್ಲಿ, ಸೇವಾ ಕಾರ್ಯಗಳಲ್ಲಿ ಅನ್ವಯಿಸಬಹುದೆಂದು ಜನ ಸಾಮಾನ್ಯರಿಗೆ ಸರಳ ರೂಪದಲ್ಲಿ ತಲುಪಿಸಬೇಕಿದೆ ಎಂದರು.

ಸಂಸ್ಕೃತಿ ಚಿಂತಕ, ವಿಮರ್ಶಕ ಗಾ.ನಾ.ಭಟ್ ಮಾತನಾಡಿ, ಭಗವತ್ಪಾದ ಶಂಕರಾಚಾರ್ಯರು ಹಿಂದು ಧರ್ಮದ ಪುನರುತ್ಪಾದಕರು. ಭಾವುಕತೆ ಮತ್ತು ವೈಚಾರಿಕತೆಗಳೆರಡು ಒಬ್ಬರ ಮನಸ್ಸಿನಲ್ಲಿ ಸಂಗಮಿಸಿತ್ತು ಎಂದರೆ ಅದು ಶಂಕರರ ಮನದಲ್ಲಿ ಮಾತ್ರ. ಅವರು ತಮ್ಮ 8 ವಯಸ್ಸಿನಲ್ಲೇ ನಾಲ್ಕು ವೇದಗಳನ್ನು ಪಠಣ ಮಾಡಿದ್ದರು. ಗೋವಿಂದ ಭಗವತ್ಪಾದರ ಪರಮ ಶಿಷ್ಯರಾಗಿದ್ದರು. ದೇಶದ 4 ಸ್ಥಳಗಳಲ್ಲಿ ಮೂರ್ತಿಗಳನ್ನು ಸ್ಥಾಪಿಸಿ ಭಗವಂತನಿಗೆ ರೂಪವನ್ನು ಕೊಟ್ಟು ಪೂಜಿಸುವಂತೆ ಮಾಡಿದರು. ಜ್ಞಾನ ಮಾರ್ಗ ತಲುಪಲು ಒಂದು ಏಣಿಯಾಗಿ ಮೂರ್ತಿ ಪೂಜೆ ತಂದವರು ಶಂಕಾಚಾರ್ಯರು ಎಂದು ಹೇಳಿದರು.

ಸನಾತನ ಭಾರತದ ಸಂಸ್ಕೃತಿಯನ್ನು ಜಗತ್ತಿಗೆ ಸಾರಿ ಹೇಳಿದ ಆಚಾರ್ಯತ್ರಯರಲ್ಲಿ ಶಂಕರಾಚಾರ್ಯರು ಮೊದಲಿಗರು. ಕೇವಲ 32 ವರ್ಷಗಳ ಕಾಲ ಜೀವಿಸಿದ್ದರು. ಶಂಕರಾಚಾರ್ಯರು, ಈ ಅಲ್ಪಾವಧಿಯಲ್ಲಿಯೇ ದೇಶದ ಮೂಲೆ ಮೂಲೆಗಳಿಗೆ ಸಂಚರಿಸಿ ಗೀತಾಚಾರ್ಯ ಶ್ರೀಕೃಷ್ಣನ ಸಿದ್ಧಾಂತ ವಾದ ಅದ್ವೈತ ತತ್ವ ಪ್ರತಿಪಾದಿಸುತ್ತ ಜಗತ್ತಿಗೆ ಸಾರಿ, ಹಲವಾರು ಮತಗಳಿಂದ ದಾಳಿಗೊಳಗಾಗುತ್ತಿದ್ದ ಸನಾತನ ಹಿಂದೂ ಧರ್ಮವನ್ನು ಪುನರುತ್ಥಾನಗೊಳಿಸಿದರು. ಶೈವ, ವೈಷ್ಣವ, ಶಾಕ್ತ, ಗಾಣಪತ್ಯ, ಸೌರ ಹಾಗೂ ಸ್ಕಂದ ಮತಗಳನ್ನು ಒಗ್ಗೂಡಿಸಿ, ಷಣ್ಮತ ಪ್ರತಿಷ್ಠಾಪಕರಾದರು. ಆದಿಶಂಕರರು ಭಗವದ್ಗೀತೆ, ಉಪನಿಷತ್ ಹಾಗು ಬ್ರಹ್ಮ ಸೂತ್ರಗಳಿಗೆ ಭಾಷ್ಯ ಬರೆದ ಮೊದಲ ಆಚಾರ್ಯರಾದರು ಎಂದು ತಿಳಿಸಿದರು.ಕಾರ್ಯಕ್ರಮದಲ್ಲಿ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಜಂಟಿ ನಿರ್ದೇಶಕ ವಿ.ಎನ್.ಮಲ್ಲಿಕಾರ್ಜುನಸ್ವಾಮಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಸಹಾಯಕ ನಿರ್ದೇಶಕ ಡಾ.ಎಂ.ಡಿ.ಸುದರ್ಶನ್, ಗಣ್ಯರಾದ ಜಿ.ಟಿ ಪ್ರಕಾಶ್, ಶ್ರೀಕಂಠ ಕುಮಾರ್ ಉಪಸ್ಥಿತರಿದ್ದರು.


# ಮೈಸೂರು ಕರಗಕ್ಕೆ ಚಾಲನೆ

**ಮೈಸೂರು: ಏ.22:–** ನಗರದ ಇಟ್ಟಿಗೆಗೂಡಿನಲ್ಲಿ ನಡೆಯುವ ಪ್ರಸಿದ್ಧ ಮೈಸೂರು ಕರಗ ಮಹೋತ್ಸವಕ್ಕೆ ಚಾಲನೆ ದೊರೆತಿದ್ದು, ಮಂಗಳವಾರ ಚಾಮುಂಡಿಬೆಟ್ಟದ ತಪ್ಪಲಿನಿಂದ ಚಾಮುಂಡಿಶ್ವರಿ ಹಸಿಕರಗ ಹಾಗೂ ಕೋಟೆ ಮಾರಮ್ಮ ದೇವಾಲಯದಿಂದ ಮಾರಿಯಮ್ಮನವರ ಹಸಿ ಕರಗವನ್ನು ಶ್ರದ್ಧಾಭಕ್ತಿಯಿಂದ ಮೆರವಣಿಗೆ ಮೂಲಕ ಇಟ್ಟಿಗೆಗೂಡಿನಲ್ಲಿರುವ ಕರಗ ದೇವಾಲಯಕ್ಕೆ ತರಲಾಯಿತು.102ನೇ ಮೈಸೂರು ಕರಗ ಮಹೋತ್ಸವ ಇಂದಿನಿಂದ ಆರಂಭವಾಗಿದ್ದು, ಏ.25ರಂದು ರಾತ್ರಿ 8 ಗಂಟೆಗೆ ಕರಗ ಮಹೋತ್ಸವ ಮೆರವಣಿಗೆ ಆರಂಭವಾಗಲಿದೆ. ಈ ಹಿನ್ನೆಲೆಯಲ್ಲಿ ಇಂದು ಬೆಳಗ್ಗೆ ಹಸಿ ಕರಗವನ್ನು ಸಾಂಪ್ರದಾಯಿಕ ಪೂಜೆ ಸಲ್ಲಿಸಿ ಮೆರವಣಿಗೆ ಮೂಲಕ ಕರಗ ದೇವಾಲಯಕ್ಕೆ ತಂದು ಇಡಲಾಯಿತು.ಹಸಿ ಕರಗ: ಕರಗ ಮಹೋತ್ಸವ ಅಂಗವಾಗಿ ಮಂಗಳವಾರ ಬೆಳಗ್ಗೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿ ಮೆಟ್ಟಿಲು ಬಳಿಯಿರುವ ಮಂಟಪದಿಂದ ಚಾಮುಂಡೇಶ್ವರಿ ಹಸಿ ಕರಗವನ್ನು ಮಂಗಳವಾದ್ಯ, ಚಂಡೆ ಮದ್ದಳೆ, ಛತ್ರಿ, ಚಾಮರದೊಂದಿಗೆ ಮೆರವಣಿಗೆಯಲ್ಲಿ ಇಟ್ಟಿಗೆಗೂಡಿನ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ದೇವಾಲಯಕ್ಕೆ ತರಲಾಯಿತು.ಮಧ್ಯಾಹ್ನ ಅರಮನೆ ಕೋಟೆ ಮಾರಮ್ಮ ದೇವಾಲಯದಿಂದ ಮಾರಿಯಮ್ಮ ಹಸಿ ಕರಗವನ್ನು ಇಟ್ಟಿಗೆಗೂಡಿಗೆ ಮೆರವಣಿಗೆಯಲ್ಲಿ ತಂದು ದೇವಾಲಯದಲ್ಲಿಡಲಾಯಿತು.ಹಸಿ ಕರಗವನ್ನು ಇಟ್ಟಿಗೆಗೂಡಿಗೆ ಮೆರವಣಿಗೆಯಲ್ಲಿ ತರುತ್ತಿದ್ದಂತೆ ಮಡಿವಾಳ ಸಮುದಾಯದವರು ಕರಗಕ್ಕೆ ಮಡಿ ಹಾಸಿ ಬರಮಾಡಿಕೊಂಡರು. ದಾರಿಯುದ್ದಕ್ಕೂ ಮಡಿ ಹಾಸಿ ಕರಗವನ್ನು ಕರೆತಂದರು. ಬಳಿಕ ಸಂಪ್ರದಾಯದಂತೆ ಹಸಿ ಕರಗಕ್ಕೆ ಮಡಿವಾಳ ಸಮುದಾಯದ ಮನೆಯಲ್ಲಿ ಮೊದಲ ಪೂಜೆ ಸಲ್ಲಿಸಲಾಯಿತು. ನಂತರ ಮತ್ತೆ ಮೆರವಣಿಗೆ ಮೂಲಕ ದೇವಾಲಯಕ್ಕೆ ತರಲಾಯಿತು.ಶಕ್ತಿದೇವತೆ ಹಾಲಭಿಷೇಕ: ಕರಗ ಮಹೋತ್ಸವ ಅಂಗವಾಗಿ ಮಂಗಳವಾರ ಬೆಳಗ್ಗಿನಿಂದಲೇ ಇಟ್ಟಿಗೆಗೂಡಿನಲ್ಲಿರುವ ರೇಣುಕಾಂಭ ದೇವಾಲಯದ ಪಕ್ಕವಿರುವ ಶಕ್ತಿದೇವತೆ ಮಾರಿಯಮ್ಮ ದೇವಾಲಯದಲ್ಲಿರುವ ದೇವಿಯ ಮೂರ್ತಿಗೆ ಇಟ್ಟಿಗೆಗೂಡಿನ ನಿವಾಸಿಗಳು ಹಾಲಿನ ಅಭಿಷೇಕ ಮಾಡಿದರು. ಕರಗ ಮಹೋತ್ಸವದ ಮೊದಲ ದಿನ ಸ್ಥಳೀಯರು ಮಾರಿಯಮ್ಮ ದೇವಾಲಯಕ್ಕೆ ಬಂದು ತಾವೇ ಹಾಲಭಿಷೇಕ ಮಾಡುವ ಪದ್ಧತಿಯಿದ್ದು, ಇಂದು ನೂರಾರು ಮಂದಿ ಹಾಲಭಿಷೇಕ ಮಾಡಿ ಕರಗ ಮಹೋತ್ಸವ ಶ್ರದ್ಧಾ ಭಕ್ತಿಯ ವಾತಾವರಣದಲ್ಲಿ ಮಿಂದೆದ್ದರು.

ಮೈಸೂರು ಕರಗ ಮಹೋತ್ಸವಕ್ಕೆ ಇಟ್ಟಿಗೂಡು ಬಡಾವಣೆ ಸಜ್ಜಾಗಿದ್ದು, ಎಲ್ಲೆಡೆ ದೀಪಾಲಂಕಾರ ಮಾಡಲಾಗಿದೆ. ಕರಗ ದೇವಾಲಯ(ರೇಣುಕಾಂಭ ದೇವಾಲಯ) ಸೇರಿದಂತೆ ಸುತ್ತಮುತ್ತಲಿನ ದೇವಾಲಯಗಳಿಗೂ ದೀಪಾಲಂಕಾರ, ಹೂವಿನ ಅಲಂಕಾರ ಮಾಡಲಾಗಿದ್ದು, ದೇವಾಲಯದ ಮುಂದೆ ಹಸಿರು ಚಪ್ಪರ ಹಾಕಲಾಗಿದೆ. ಬಡಾವಣೆ ಸಂಪರ್ಕ ಕಲ್ಪಿಸುವ ದೇವಾಲಯದ ರಸ್ತೆಯಲ್ಲಿ 102ನೇ ವರ್ಷದ ಮೈಸೂರು ಕರಗ ಮಹೋತ್ಸವಕ್ಕೆ ಸ್ವಾಗತ ಎಂಬ ಸ್ವಾಗತ ಕಮಾನು ಅಳವಡಿಸಲಾಗಿದ್ದು, ದಾರಿಯುದ್ದಕ್ಕೂ ವಿದ್ಯುತ್ ದೀಪದಿಂದ ವಿವಿಧ ಆಕೃತಿ ನಿರ್ಮಿಸಿ ಇಡಲಾಗಿದೆ.

ಹಬ್ಬದ ವಾತಾವರಣ: ಕರಗ ಮಹೋತ್ಸವದ ಅಂಗವಾಗಿ ಇಟ್ಟಿಗೆಗೂಡಿನಲ್ಲಿ ಹಬ್ಬದ ವಾತಾವರಣ ನಿರ್ಮಾಣವಾಗಿದೆ. ಪ್ರತಿಯೊಂದು ಮನೆಯಲ್ಲೂ ಕರಗ ಮಹೋತ್ಸವವನ್ನು ದೊಡ್ಡ ಹಬ್ಬದಂತೆ ಆಚರಿಸುತ್ತಿದ್ದು, ವಿವಿಧೆಡೆಯಿಂದ ಸಂಬಂಧಿಕರನ್ನು ಆಹ್ವಾನಿಸಿದ್ದಾರೆ.

# ಗ್ರಾಮ ಸಮೀಕ್ಷೆಗೆ ಪೂರ್ವಭಾವಿ ಸಭೆ: ಸರ್ಕಾರಿ ಯೋಜನೆಗಳ ಸ್ಥಿತಿಗತಿ ಪರಿಶೀಲನೆಗೆ ಒತ್ತು





**ಯಾದಗಿರಿ:ಏ.22:** ಜಿಲ್ಲೆಯ ಮಸ್ಕನಳ್ಳಿ ಗ್ರಾಮದಲ್ಲಿ ಸಾರ್ವಜನಿಕರಿಗೆ ಲಭ್ಯವಾಗುತ್ತಿರುವ ಸರ್ಕಾರಿ ಯೋಜನೆಗಳ ಅನುಷ್ಠಾನದ ಸ್ಥಿತಿಗತಿ ತಿಳಿಯಲು ಗ್ರಾಮ ಮಟ್ಟದ ಸಮೀಕ್ಷೆ ನಡೆಸುವ ಉದ್ದೇಶದಿಂದ ಪೂರ್ವಭಾವಿ ಸಭೆ ಆಯೋಜಿಸಲಾಯಿತು.

ಯಾದಗಿರಿ ಜಿಲ್ಲಾ ನ್ಯಾಯಾಲಯದ ಸಭಾಂಗಣದಲ್ಲಿ ನಡೆದ ಈ ಸಭೆಗೆ ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರಾದ ಮರುಳಸಿದ್ದಾರಾಧ್ಯ ಹೆಚ್.ಜೆ. ಅಧ್ಯಕ್ಷತೆ ವಹಿಸಿದ್ದರು. ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ ಹಮ್ಮಿಕೊಳ್ಳಲಾದ ಈ ಸಭೆಯಲ್ಲಿ ಅರೆಕಾಲಿಕ ಸ್ವಯಂಸೇವಕರಿಗೆ ಸಮೀಕ್ಷೆಯ ಉದ್ದೇಶ, ವಿಧಾನ ಹಾಗೂ ಕಾರ್ಯಪದ್ಧತಿ ಕುರಿತು ವಿವರವಾದ ಮಾರ್ಗದರ್ಶನ ನೀಡಲಾಯಿತು.

ಗ್ರಾಮ ಮಟ್ಟದಲ್ಲಿ ವಿವಿಧ ಸರ್ಕಾರಿ ಯೋಜನೆಗಳು ನಿಜವಾಗಿ ಜನರಿಗೆ ತಲುಪುತ್ತಿವೆಯೇ, ಅವುಗಳ ಪ್ರಯೋಜನ ಪಡೆಯುವಲ್ಲಿ ಎದುರಾಗುವ ಅಡೆತಡೆಗಳು ಯಾವುವು ಎಂಬುದನ್ನು ನಿಖರವಾಗಿ ಗುರುತಿಸಲು ಈ ಸಮೀಕ್ಷೆ ನೆರವಾಗಲಿದೆ ಎಂದು ಸಭೆಯಲ್ಲಿ ಅಭಿಪ್ರಾಯ ವ್ಯಕ್ತವಾಯಿತು ಇನ್ನು
ಸ್ವಯಂಸೇವಕರು ಸಮೀಕ್ಷೆ ವೇಳೆ ನಿಷ್ಠೆಯಿಂದ ಮಾಹಿತಿ ಸಂಗ್ರಹಿಸಿ, ವಾಸ್ತವಿಕ ವರದಿ ಸಲ್ಲಿಸುವಂತೆ ಸೂಚಿಸಲಾಯಿತು. ಸಂಗ್ರಹಿಸಲಾದ ಮಾಹಿತಿಯ ಆಧಾರದ ಮೇಲೆ ಅಗತ್ಯ ಕ್ರಮ ಕೈಗೊಳ್ಳಲು ಹಾಗೂ ಜನರಿಗೆ ತಲುಪಬೇಕಾದ ಸೌಲಭ್ಯಗಳನ್ನು ಸುಧಾರಿಸಲು ಈ ಸಮೀಕ್ಷೆ ಸಹಕಾರಿಯಾಗಲಿದೆ ಎಂದು ತಿಳಿಸಲಾಯಿತು.

ಸಭೆಯಲ್ಲಿ ನ್ಯಾಯಾಲಯದ ಅಧಿಕಾರಿಗಳು, ಪ್ರಾಧಿಕಾರದ ಸಿಬ್ಬಂದಿ ಹಾಗೂ ಅರೆಕಾಲಿಕ ಸ್ವಯಂಸೇವಕರು ಉಪಸ್ಥಿತರಿದ್ದರು.

# ಅಕ್ರಮ ಅದಿರು ಸಾಗಾಣೆ ಪತ್ತೆಹಚ್ಚಿದಅಕ್ರಮ ಅದಿರು ಸಾಗಾಣೆ ಪತ್ತೆಹಚ್ಚಿದ ಸಂಸದ ಇ.ತುಕರಾಂ




**ಬಳ್ಳಾರಿ, ಏ.22:** ಈ ಜಿಲ್ಲೆಗೂ ಅಕ್ರಮ ಅದಿರು ಸಾಗಾಣೆಗೂ ಬಿಡಿಸಲಾರದ ಸಂಬಂಧ, ನಂಟು. ಏನೇ ಕ್ರಮಗಳನ್ನು ಕೈಗೊಂಡರೂ ಅಕ್ರಮ ದಂಧೆ ಸ್ವರೂಪ ಬೇರೆ ಬೇರೆ ರೂಪದಲ್ಲಿ ನಡೆಯುತ್ತಲೇ ಇದೆ ಎಂಬುದನ್ನು ಲೋಕಸಭಸ ಸದಸ್ಯ ಇ.ತುಕರಾಂ ಅವರು ಇಂದು ಪತ್ತೆಹಚ್ಚಿ ಹೊರ ಹಾಕಿದ್ದಾರೆ.

ಸಂಡೂರು ಭಾಗದ ಗಣಿ ಪ್ರದೇಶಗಳಿಂದ ಕಬ್ಬಿಣ ಅದಿರನ್ನು ತುಂಬಿಕೊಂಡು ದಿನನಿತ್ಯ 1500 ಕ್ಕೂ ಹೆಚ್ಚು ಲಾರಿಗಳು ಜಿಂದಾಲ್ ಉಕ್ಕು ಕಾರ್ಖಾನೆ ಮತ್ತು ಇತರೇ ಕಾರ್ಖಾನೆಗಳಿಗೆ ಅದಿರನ್ನು ಸಾಗಿಸುತ್ತವೆ.
ಒಂದು ಲಾರಿಯಲ್ಲಿ ಕನಿಷ್ಟ 18 ರಿಂದ 40 ಟನ್ ವರೆಗೆ ಅದಿರನ್ನು ಸಾಗಾಟ ಮಾಡಲಾಗುತ್ತದೆ.
ಅದಿರು ಉತ್ಪಾದನೆಯ ಪ್ರದೇಶದಲ್ಲಿ ಪರ್ಮಿಟ್ ಜನರೇಟ್ ಮಾಡಿ ಅದರಲ್ಲಿ ಎಷ್ಟು ಅದಿರು ಸಾಗಾಣೆ ಎಲ್ಲಿಗೆ ಮಾಡಲಾಗುತ್ತದೆ ಎಂಬುದನ್ನು ಉಲ್ಲೇಖಿಸಲಾಗಿರುತ್ತದೆ.

ಅದಿರನ್ನು ಹೊತ್ತು ತರುವ ಲಾರಿ ಪರ್ಮಿಟ್ ನೊಂದಿಗೆ ಬರುತ್ತದೆ. ಲಾರಿ ನಿಗಧಿ ಪ್ರದೇಶಕ್ಕೆ ನಿಗಧಿತ ಅದಿರನ್ನು ಸಾಗಾಟ ಮಾಡುತ್ತಿದೆಯೇ ಎಂವುದನ್ನು ಪತ್ತೆಹಚ್ಚಲು ಬಂಡಿ ಹಟ್ಟಿ ಬಳಿ ಚೆಕ್ ಪೋಸ್ಟ್ ನಿರ್ಮಾಣ ಮಾಡಿದೆ. ಗಣಿ ಇಲಾಖೆ.
ಇಲ್ಲಿ ಲಾರಿಯ ತೂಕ, ಎಷ್ಟು ಪ್ರಮಾಣದ ಅದಿರು ಸಾಗಾಟ ಆಗುತ್ತದೆ ಎಂವುದನ್ನು ವೇ ಬ್ರಿಡ್ಜ್ ಮೂಲಕ ಪರಿಶೀಲನೆ ಮಾಡಲಾಗುತ್ತದೆ.

ಆದರೆ ಕಳೆದ ಹಲವು ತಿಂಗಳಿಂದ 4 ಚೆಕ್ ಪೋಸ್ಟ್ ಗಳಲ್ಲಿ ಕೇವಲ ಒಂದು ಮಾತ್ರ ಕೆಲಸ ಮಾಡುತ್ತಿದೆ. ಇನ್ನು ಮೂರು ಕೆಟ್ಟು ನಿಂತಿವೆ. ಆದರೂ ಈ ಕೆಟ್ಟ ಚೆಕ್ ಪೋಸ್ಟ್ ನಲ್ಲಿಯೇ ಲಾರಿ ಸಾಗಿ ಮುದ್ರೆ ಹಾಕಿಸಿಕೊಂಡು ಎಲ್ಲ ಸರಿ ಇದೆ ಎಂಬಂತೆ ಸಾಗಾಟ ಮಾಡಲಾಗುತ್ತಿದೆ.ಸರಿ ಇರುವ ಚೆಕ್ ಪೋಸ್ಟ್ ನಲ್ಲಿ ಮಾತ್ರ ಸರಿಯಾದ ಪ್ರಮಾಣದ ಅದಿರು ತುಂಬಿರುವ ಲಾರಿಗಳು ಸಾಗುತ್ತವೆ. ನಿಗಧಿತ ಪ್ರಮಾಣಕ್ಕಿಂತ ಹೆಚ್ಚು ಅದಿರನ್ನು ತರುವ ಲಾರಿಗಳು ಕೆಟ್ಟಿರುವ ಚೆಕ್ ಪೋಸ್ಟ್ ಗಳಲ್ಲಿ ಸಾಗಿ ಅಕ್ರಮ ವ್ಯವಹಾರ ಮಾಡುತ್ತಿವೆ ಎಂಬುದು ಈಗ ಬಹಿರಂಗ ಗೊಂಡಿದೆ.

ಇಲ್ಲಿ ಇಂದು ಇದನ್ನು ಪತ್ತೆಹಚ್ಚಿದ ಲೋಕಸಭಾ ಸದಸ್ಯ ಇ.ತುಕರಾಂ ಅವರು ಇಲ್ಲಿ ಕೆಲಸ ಮಾಡುವ ಸಿಬ್ಬಂದಿಗೆ ಪ್ರಶ್ನಿಸಿದರೆ ಕೆಟ್ಟಿರುವ ಬಗ್ಗೆ ಕಳೆದ ಮೂರು ತಿಂಗಳಿಗೂ ಮೊದಲೇ ಮೇಲಾಧಿಕಾರಿಗಳಿಗೆ ತಿಳಿಸಿದೆ. ಆದರೆ ಅವರು ಸರಿ ಮಾಡಿಸಿಲ್ಲ ಎನ್ನುತ್ತಿದ್ದಾರೆ.ಇದರಲ್ಲಿ ಗಣಿ ಇಲಾಖೆ ಅಧಿಕಾರಿಗಳು ಶಾಮೀಲಾಗಿ ಈ ದಂದೆ ನಡೆಸಿದ್ದಾರೆ. ಕೋಟ್ಯಾಂತರ ರೂ ಮೌಲ್ಯದ ಅದಿರನ್ನು ಅಕ್ರಮವಾಗಿ ಸಾಗಾಟ ನಡೆದಿದೆ ಎಂಬುದು ತುಕರಾಂ ಅವರ ಆರೋಪವಾಗಿದೆ.

ಈ ಬಗ್ಗೆ ವಿವರಣೆ ಕೇಳಲು ಕರೆ ಮಾಡಿದರೆ ಗಣಿ ಇಲಾಖೆಯ ಅಧಿಕಾರಿ ದ್ವಿತೀಯ ಅವರು ಸ್ವೀಕರಿಸಲಿಲ್ಲ.
ಒಟ್ಟಾರೆ ಇಲ್ಲಿ ಅಕ್ರಮವಾಗಿ ಅದಿರಿನ ಸಾಗಾಟ ನಡೆದಿರುವುದಂತೂ ಸತ್ಯ ಎನ್ನುತ್ತಾರೆ ಸಂಡೂರಿನ ಜನತೆ. ಇದರ ಲಾಭ ಪಡೆಯುವವರು ಜಿಂದಾಲ್ ಸಂಸ್ಥೆ. ಇನ್ನು ಎನ್ ಎಂಡಿಸಿ ಅಧಿಕಾರಿಗಳ ಕೈವಾಡವೂ ಇರುವ ಸಾಧ್ಯತೆ ಇದೆ ಎನ್ನಲಾಗುತ್ತಿದೆ.

# ಗೋವಿಂದರಾವ ಆಯೋಗದ ವರದಿ ಆದರಿಸಿ ಕಲ್ಯಾಣದ ಕಾಲಮಿತಿಯ ಅಭಿವೃದ್ಧಿಗೆ ವೈಜ್ಞಾನಿಕ ಕ್ರಿಯೆ ಯೋಜನೆ ರೂಪಿಸಲು ಹೋರಾಟ ಸಮಿತಿ ಆಗ್ರಹ



**ಕಲಬುರಗಿ:ಏ.22:**ಗೋವಿಂದರಾವ ನೇತೃತ್ವದ ನೂತನ ಪ್ರಾದೇಶಿಕ ಅಸಮತೂಲನಾ ನಿವಾರಣಾ ಆಯೋಗದ ವರದಿ ಆದರಿಸಿ ಸರ್ಕಾರ ಕಲ್ಯಾಣ ಕರ್ನಾಟಕ ಪ್ರದೇಶದ ನೀಲಿ ನಕ್ಷೆ ಸಿದ್ಧಪಡಿಸಿ ಕಲ್ಯಾಣದ ಸರ್ವಾಂಗೀಣ ಕಾಲಮಿಯ ಅಭಿವೃದ್ಧಿಗೆ ವೈಜ್ಞಾನಿಕ ಕ್ರಿಯಾ ಯೋಜನೆ ರೂಪಿಸಿ ಕಲ್ಯಾಣ ಕರ್ನಾಟಕ ಪ್ರದೇಶದ ಪ್ರಾದೇಶಿಕ ಅಸಮತೂಲನೆ ನಿವಾರಣೆಗೆ ಕಠಿಣ ಕ್ರಮ ಕೈಗೊಳ್ಳಲು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿಯ ಗೌರವಾಧ್ಯಕ್ಷರಾದ ಬಸವರಾಜ ದೇಶಮುಖ ಮತ್ತು ಸಂಸ್ಥಾಪಕ ಅಧ್ಯಕ್ಷರಾದ ಡಾ.ಲಕ್ಷ್ಮಣ ದಸ್ತಿಯವರು ಸರ್ಕಾರಕ್ಕೆ ಒತ್ತಾಯಿಸಿದ್ದಾರೆ.
ಈ ಹಿಂದೆ ಎಸ್ ಎಮ್ ಕೃಷ್ಣರವರ ಸರ್ಕಾರದ ಅವಧಿಯಲ್ಲಿ ಪ್ರಾದೇಶಿಕ ಸಮತೋಲನಾ ನಿವಾರಣೆಗೆ ನಂಜುಂಡಪ್ಪ ನೇತೃತ್ವದಲ್ಲಿ ಪ್ರಾದೇಶಿಕ ಸಮತೋಲನಾ ನಿವಾರಣಾ ಸಮಿತಿ ರಚಿಸಲಾಗಿತ್ತು ನಂಜುಂಡಪ್ಪ ನೇತೃತ್ವದ ಆಯೋಗ 2002 ರಲ್ಲಿ ಆಗಿನ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು ನಂಜುಂಡಪ್ಪ ವರದಿ ಆದರಿಸಿ ಸರ್ಕಾರ ಹಿಂದುಳಿದ ಪ್ರದೇಶದ, ಜಿಲ್ಲೆಗಳ, ತಾಲೂಕುಗಳ ಅಭಿವೃದ್ಧಿಗೆ ಯೋಜನೆಗಳು ರೂಪಿಸಿರುವಂತೆ ಕಲ್ಯಾಣ ಕರ್ನಾಟಕ ಪ್ರದೇಶದ ಕೆಲವಷ್ಟು ಮಹತ್ವದ ಯೋಜನೆಗಳು ಜಾರಿಗೆ ಬಂದವು ಆದರೆ ಬಹು ನಿರೀಕ್ಷಿತ ಮಟ್ಟದಲ್ಲಿ ಅಭಿವೃದ್ಧಿ ಆಗದೆ ಕಲ್ಯಾಣ ಕರ್ನಾಟಕದ ಮಾನವ ಅಭಿವೃದ್ಧಿ ಮತ್ತೆ ಕೊನೆಯ ಸ್ಥಾನದಲ್ಲಿ ಇರುವುದು ಖೇದಕರ ಸಂಗತಿಯಾಗಿದೆ.
ಇದನ್ನು ಗಮನದಲ್ಲಿಟ್ಟುಕೊಂಡು ಪ್ರಸ್ತುತ ಸಿದ್ದರಾಮಯ್ಯ ನವರ ನೇತೃತ್ವದ ಸರ್ಕಾರ ಅಭಿವೃದ್ಧಿ ಸೂಚ್ಯಂಕಗಳು ಪರಿಷ್ಕರಣೆ ಮಾಡಿ ಪ್ರಾದೇಶಿಕ ಸಮತೋಲನಾ ನಿವಾರಣೆಗೆ ಗೋವಿಂದರಾವ ನೇತೃತ್ವದಲ್ಲಿ ನೂತನ ಪ್ರಾದೇಶಿಕ ಸಮತೋಲನಾ ನಿವಾರಣಾ ಸಮಿತಿ ರಚಿಸಿ ಕಾಲಮಿತಿಯಲ್ಲಿ ವರದಿ ನೀಡಲು ಸೂಚಿಸಿತ್ತು ಅದರಂತೆ ಗೋವಿಂದರಾವ ನೇತೃತ್ವದ ನೂತನ ಸಮಿತಿ ಸರ್ಕಾರಕ್ಕೆ ಕಾಲಮಿತಿಯಲ್ಲಿ ಅಂದರೆ ಬಜೆಟ್ ಅಧಿವೇಶನದ ಪೂರ್ವದಲ್ಲಿಯೆ ಸರ್ಕಾರಕ್ಕೆ ಅಧಿಕೃತ ವರದಿ ಸಲ್ಲಿಸಿದೆ.ರಾಜ್ಯ ಸರ್ಕಾರ ಗೋವಿಂದ ನೇತೃತ್ವದ ವರದಿಗೆ ಗಂಭೀರವಾಗಿ ಪರಿಗಣಿಸಿ ತಕ್ಷಣ ನೀಲಿ ನಕ್ಷೆ ಸಿದ್ಧಪಡಿಸಿ ಪ್ರಾದೇಶಿಕ ಸಮತೋಲನಾ ನಿವಾರಣೆಗೆ ವೈಜ್ಞಾನಿಕ ಆಧಾರದಂತೆ ಕ್ರಿಯಾ ಯೋಜನೆ ರೂಪಿಸಿ ಕಾಲಮಿತಿಯಲ್ಲಿ ಕಲ್ಯಾಣ ಕರ್ನಾಟಕ ಪ್ರದೇಶದ ಅಭಿವೃದ್ಧಿಗೆ ಕಠಿಣ ಕ್ರಮ ಕೈಗೊಳ್ಳಲು ಕಲ್ಯಾಣ ಕರ್ನಾಟಕ ಹೋರಾಟ ಸಮಿತಿ ಸರ್ಕಾರಕ್ಕೆ ಬಲವಾಗಿ ಒತ್ತಾಯಿಸಿದೆ.

# ಶಿಕ್ಷಣದಿಂದ ಮಾತ್ರ ದಾಸ್ಯದಿಂದ ಮುಕ್ತಿ



**ಮೈಸೂರು: ಏ.22:** ಡಾ.ಬಿ.ಆರ್.ಅಂಬೇಡ್ಕರ್ ಹೇಳಿದಂತೆ ಶಿಕ್ಷಣ ನಮ್ಮ ಹಕ್ಕು. ಅವರ ಆಶಯದಂತೆ ಪ್ರತಿಯೊಬ್ಬರೂ ಶಿಕ್ಷಣವನ್ನು ಪಡೆಯಬೇಕು. ಶಿಕ್ಷಣದಿಂದ ಮಾತ್ರ ಮಾನಸಿಕ ದಾಸ್ಯದಿಂದ ಹೊರಬರಲು ಸಾಧ್ಯ ಎಂದು ವಿಶ್ರಾಂತ ಕುಲಪತಿ ಡಾ.ಸಬಿಹಾ ಭೂಮಿಗೌಡ ಹೇಳಿದರು.

ನಗರದ ನಟರಾಜ ಸಭಾಂಗಣದಲ್ಲಿ ಬಾಬಾ ಸಾಹೇಬ್ ಡಾ.ಬಿ.ಆರ್.ಅಂಬೇಡ್ಕರ್ ರವರ 135ನೇ ಜನ್ಮದಿನದ ಅಂಗವಾಗಿ ಬಹುತ್ವದ ಭಾರತವನ್ನು ಛಿದ್ರಗೊಳಿಸುತ್ತಿರುವ ಸರ್ಕಾರಗಳ ಧಮನಕಾರಿ ಹುನ್ನಾರ ಖಂಡಿಸಿ ಶೋಷಿತ ತಳ ಸಮುದಾಯಗಳ ಐಕ್ಯತಾ ಸಮಾವೇಶ ಉದ್ಘಾಟಿಸಿ ಮಾತನಾಡಿದ ಅವರು, ಅಂಬೇಡ್ಕರ್ ತಮ್ಮ ಪ್ರತಿ ಭಾಷಣ, ಕಾರ್ಯಕ್ರಮಗಳಲ್ಲಿ ಮಕ್ಕಳಿಗೆ ಶಿಕ್ಷಣ ನೀಡಿ, ಮುಂದಿನ ಪಿಳಿಗೆಗೆ ಶಿಕ್ಷಣ ಅವರ ಹಕ್ಕು ಎಂದು ಹೇಳುತ್ತಿದ್ದರು. ಎಷ್ಟೇ ಕಷ್ಟವಾದರೂ ಮಕ್ಕಳಿಗೆ ಶಿಕ್ಷಣ ಕೊಡಿಸಿ ಎಂದು ಕರೆ ಕೊಡುತ್ತಿದ್ದರು. ಶಿಕ್ಷಣದಿಂದ ಅರಿವು ಮೂಡಲು ಸಾಧ್ಯ. ನಮ್ಮ ಸುತ್ತಮುತ್ತಲಿನ ಪರಿಸರದಲ್ಲಿ ನ್ಯಾಯ ಮತ್ತು ಅನ್ಯಾಯ ಅರ್ಥ ಮಾಡಿಕೊಳ್ಳಲು ಸಾಧ್ಯವಾಗುತ್ತದೆ ಎಂದು ತಿಳಿಸಿದರು.

ನ್ಯಾಯ ಮತ್ತು ಅನ್ಯಾಯ ಅರ್ಥ ಮಾಡಿಕೊಳ್ಳಲು ಶಿಕ್ಷಣ ಒಂದು ಪ್ರಖರ ದಾರಿ ಎಂದು ಅಂಬೇಡ್ಕರ್ ಭಾವಿಸಿದ್ದರು. ಹೀಗಾಗಿ ತಮ್ಮ ನೆಲೆಯಲ್ಲಿಯೇ ಅನೇಕ ಶಿಕ್ಷಣ ಸಂಸ್ಥೆಗಳನ್ನು ಸ್ಥಾಪಿಸಿದ್ದರು. ಹುಡುಗರು, ಹುಡುಗಿಯರು ಒಟ್ಟಿಗೆ ಓದುವ ಶಿಕ್ಷಣ ಸಂಸ್ಥೆ ಹುಟ್ಟು ಹಾಕಿದ್ದರು. ಅವರು ಆರಂಭಿಸಿದ ಶಿಕ್ಷಣ ಸಂಸ್ಥೆಗಳಲ್ಲಿ ಹೆಚ್ಚು ಹೆಣ್ಣು ಮಕ್ಕಳು ಪ್ರವೇಶ ಪಡೆಯುತ್ತಿದ್ದರು ಎಂದರು.

ಅಂಬೇಡ್ಕರ್ ಮಹಿಳೆಯರ ಬಗ್ಗೆ ಅಪಾರ ಕಾಳಜಿ ಹೊಂದಿದ್ದರು. ಅವರ ಹಕ್ಕಿಗಾಗಿ ಶ್ರಮಿಸುತ್ತಿದ್ದರು, ಅವರ ಹಕ್ಕುಗಳನ್ನು ಗೌರವಿಸುತ್ತಿದ್ದರು. ಗೃಹಸ್ಥನಿಗೆ ಇರುವ ಅಧಿಕಾರ ಗೃಹಿಣಿಗೂ ಇದೆ ಎಂದು ಸಾರಿ ಸಾರಿ ಹೇಳುತ್ತಿದ್ದರು. ಸಭೆ, ಸಮಾರಂಭ ಮಾಡುವಾಗ ಕೇವಲ ಪುರುಷರಿರುವ ಸಭೆಯನ್ನು ಅವರು ಒಪ್ಪುತ್ತಿರಲಿಲ್ಲ ಎಂದರು.

ಸಭೆಗಳಲ್ಲಿ, ಹೋರಾಟಗಳಲ್ಲಿ ಹೆಣ್ಣುಮಕ್ಕಳ ಪಾಲ್ಗೊಳ್ಳುವಿಕೆಯನ್ನು ಎಚ್ಚರದಿಂದ ಗುರುತಿಸುತ್ತಿದ್ದರು. ಹೆಣ್ಣು ಮಕ್ಕಳು ಇಲ್ಲದ ಹೋರಾಟ ಯಶಸ್ಸು ಕಾಣುವುದಿಲ್ಲ ಎಂದು ಅರ್ಥ ಮಾಡಿಕೊಂಡಿದ್ದರು. ಮಹಿಳೆಯರಿಗಾಗಿಯೇ ವಿಶೇಷ ಘೋಷ್ಠಿ, ಸಭೆ, ಸಮಾರಂಭ ಆಯೋಜಿಸುತ್ತಿದ್ದರು. 1930ರ ದಶಕದಲ್ಲಿಯೇ ಒಂದು ಕಡೆ ಪುರುಷರ ಸಭೆಗಳು ನಡೆಯುತ್ತಿದ್ದರೆ ಮತ್ತೊಂದು ಕಡೆ ಹೆಣ್ಣುಮಕ್ಕಳ ಸಭೆಗಳನ್ನು ಅಂಬೇಡ್ಕರ್ ಆಯೋಜಿಸುತ್ತಿದ್ದರು ಎಂದು ಹೇಳಿದರು

ಒಬ್ಬೊಬ್ಬರಿಗೆ ಒಂದೊಂದು ವಿಚಾರದಲ್ಲಿ ಅಂಬೇಡ್ಕರ್ ಹತ್ತಿರವಾಗುತ್ತಾರೆ. ತಳ ಸಮುದಾಯದಿಂದ ಹಿಡಿದು ದೇಶದ ಎಲ್ಲಾ ನಾಗರಿಕರಿಗೆ ಸಂಬಂಧಿಸಿದ ಹಕ್ಕುಗಳನ್ನು ಕೊಡುವುದಕ್ಕೆ ಹಾಗೂ ಘನತೆಯಿಂದ ಬದುಕುವುದನ್ನು ತೋರಿಸಿಕೊಟ್ಟಿದ್ದಾರೆ ಎಂದರು.

ಅಂಬೇಡ್ಕರ್ ಅವರದು ಮಾತೃ ಹೃದಯ. ಯಾರು ಹಿಂದೆ ಉಳಿದಿರುತ್ತಾರೋ, ಯಾರಿಗೆ ಹಕ್ಕುಗಳು ಇರುವುದಿಲ್ಲವೋ ಅವರಿಗೆ ಹಕ್ಕುಗಳನ್ನು ನೀಡಿ, ಘನತೆಯ ಬದುಕಿನ ರುಚಿಯನ್ನು ಎಲ್ಲರಿಗೂ ಉಣ ಬಡಿಸಿದರು. ಧ್ವನಿ ಇಲ್ಲದವರಿಗಾಗಿ, ಹಕ್ಕುಗಳಿಂದ ವಂಚಿತರಾದವರಿಗಾಗಿ ಎಡಬಿಡದೆ ಕೆಲಸ ಮಾಡಿ, ಕೊನೆಯವರೆಗೂ ಹಲವು ರೀತಿಯ ಸವಾಲುಗಳನ್ನು ಎದುರಿಸಿದ್ದರು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ದಲಿತ ಸಂಘರ್ಷ ಸಮಿತಿಯ ಜಿಲ್ಲಾ ಸಂಚಾಲಕ ಬೆಟ್ಟಯ್ಯ ಕೋಟೆ, ಹಿರಿಯ ಪಾಧ್ಯಾಪಕ ಡಾ.ಜೆ.ಸೋಮಶೇಖರ್, ದಸಂಸ ಜಿಲ್ಲಾ ಸಂಘಟನಾ ಸಂಚಾಲಕ ಹೆಗ್ಗನೂರು ನಿಂಗರಾಜು, ಜಿಲ್ಲಾ ಖಜಾಂಚಿ ಬಿ.ಡಿ.ಶಿವಬುದ್ದಿ, ಆರ್.ಸೊಮಣ್ಣ, ಕುಪ್ಪೇಗಾಲ, ಎಸ್.ಕಲ್ಲಹಳ್ಳಿ ಕುಮಾರ್ ಹಾಜರಿದ್ದರು.

ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ
6360866626

# ಡಾ. ಅಂಬೇಡ್ಕರ್ ಜಯಂತಿ ಅಂಗವಾಗಿ ಭೀಮ ರತ್ನ ಪ್ರಶಸ್ತಿ ಕಾರ್ಯಕ್ರಮ : ರವಿಕುಮಾರ ಬೀರನಳ್ಳಿ

**ಜೇವರ್ಗಿ :ಏ.22:** ಕರ್ನಾಟಕ ದಲಿತ ಸಂಘರ್ಷ ಸಮಿತಿ (ರಿ.) ಭೀಮವಾದ, ಜೇವರ್ಗಿ ವತಿಯಿಂದ ಸಂವಿಧಾನ ಶಿಲ್ಪಿ, ಭಾರತ ರತ್ನ ಡಾ. ಬಿ.ಆರ್. ಅಂಬೇಡ್ಕರ್ ಅವರ 135ನೇ ಜಯಂತ್ಯೋತ್ಸವದ ಅಂಗವಾಗಿ ಭೀಮ ರತ್ನ ಪ್ರಶಸ್ತಿ ಪ್ರದಾನ ಸಮಾರಂಭವನ್ನು ಆಯೋಜಿಸಲಾಗಿದೆ.

ಏಪ್ರಿಲ್ 28, 2026ರಂದು ಮಂಗಳವಾರ ಸಂಜೆ 4 ಗಂಟೆಗೆ ಜೇವರ್ಗಿ ತಾಲೂಕಿನ ಬುಗ್ಗಿ ನಗರದಲ್ಲಿರುವ ಧರ್ಮಸಿಂಗ್ ಬಡಾವಣೆಯಲ್ಲಿ ಈ ಕಾರ್ಯಕ್ರಮ ನಡೆಯಲಿದೆ.

ಕಾರ್ಯಕ್ರಮವನ್ನು ಜೇವರ್ಗಿ ಶಾಸಕ ಹಾಗೂ ಕೆ.ಕೆ.ಆರ್.ಡಿ.ಬಿ ಅಧ್ಯಕ್ಷರಾದ ಅಜಯ್ ಧರ್ಮಸಿಂಗ್ ಉದ್ಘಾಟಿಸಲಿದ್ದಾರೆ. ಮಾಜಿ ಶಾಸಕ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಜ್ಯೋತಿ ಬೆಳಗಲಿದ್ದು, ಡಿ.ಎಸ್.ಎಸ್ ಭೀಮವಾದ ಸಂಸ್ಥಾಪಕರಾದ ಪರಶುರಾಮ ನೀಲನಾಯಕ್ ಅಧ್ಯಕ್ಷತೆ ವಹಿಸಲಿದ್ದಾರೆ.

ಡಿ.ಎಸ್.ಎಸ್ ಭೀಮವಾದ ತಾಲೂಕು ಅಧ್ಯಕ್ಷರಾದ ರವಿಕುಮಾರ ಎಂ. ಬೀರನಹಳ್ಳಿ ಅವರ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಲಿದ್ದು, ಚಂದ್ರಶೇಖರ ಹರನಾಳ, ಶಾಂತಪ್ಪ ಕೂಡಲಗಿ, ಸುಭಾಷ ಚನ್ನೂರ ಹಾಗೂ ರಾಜಶೇಖರ ಸೀರಿ ಅವರು ಡಾ. ಅಂಬೇಡ್ಕರ್ ಅವರ ಭಾವಚಿತ್ರಕ್ಕೆ ಮಾಲಾರ್ಪಣೆ ಸಲ್ಲಿಸಲಿದ್ದಾರೆ.

ಕಾರ್ಯಕ್ರಮದಲ್ಲಿ ಎಮ್.ಡಿ. ರೌಫ್ ಹವಾಲ್ದಾರ, ಭಗವಂತರಾಯ ಬೆಣ್ಣೂರ, ಶರಣು ಗುತ್ತೇದಾರ, ರಾಜಶೇಖರ ಶಿಲ್ಪಿ, ಶಿವಶರಣ ಹಳಿಮನಿ, ರಾಜೇಶ್ವರ ಪಾಂಡುರಂಗ ಸಾಹುಕಾರ, ಹುಸೇನಸಾಬ್ ಸೇರಿದಂತೆ ಅನೇಕ ಗಣ್ಯರು ಮುಖ್ಯ ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಭೀಮ ರತ್ನ ಪುರಸ್ಕೃತರ ಪಟ್ಟಿ:

ವಿವಿಧ ಕ್ಷೇತ್ರಗಳಲ್ಲಿ ಸಾಧನೆಗೈದ ಖಾಜಾ ಪಟೇಲ್ (ಬಿಎಸ್‌ಎಫ್ ನಿವೃತ್ತ), ಮೈನೋದ್ದೀನ್ ಅಕ್ಟರ್ ಸಾಬ್, ಫಯಾಜ್ ಮನಿಯಾರ್, ರವಿಚಂದ್ರ ಗುತ್ತೇದಾರ, ಶ್ರೀನಿವಾಸ, ನಿಂಗಣ್ಣ ರದ್ದೇವಾಡಗಿ, ಡಾ. ವಿನೋದ ಶಿಡ್ಡಿ, ರಫೀಕ್ ಜಮಾದಾರ, ಚಂದ್ರಶೇಖರ ಮಾಲಿಪಾಟೀಲ, ಮರೆಪ್ಪ ಬೇಗಾರ ಸೇರಿದಂತೆ ಹಲವರಿಗೆ ಭೀಮ ರತ್ನ ಪ್ರಶಸ್ತಿ ಪ್ರದಾನ ಮಾಡಲಾಗುತ್ತದೆ ಎಂದು ಸಮಿತಿ ತಿಳಿಸಿದೆ.

ಕಾರ್ಯಕ್ರಮದಲ್ಲಿ ರಾಜಕೀಯ, ಸಾಮಾಜಿಕ ಹಾಗೂ ಶೈಕ್ಷಣಿಕ ಕ್ಷೇತ್ರದ ಮುಖಂಡರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಧರ್ಮಸಿಂಗ್ ಬಡಾವಣೆಯ ನಿವಾಸಿಗಳಾದ ಶಂಕರ್ ಹೊಸಮನಿ, ಬಸವರಾಜ ಮಡಿವಾಳ, ಗುರಪ್ಪ ಆಲೂರು, ದರ್ಶನ್ ಭೋವಿ, ಕಾಸಿಂ, ಸುರೇಶ್ ಕುಮಾರ್ ಬೀರನಹಳ್ಳಿ, ಬಾಬು ರಾವ್ ಬೀರನಹಳ್ಳಿ ಸೇರಿದಂತೆ ಸಮಿತಿಯವರು ಪತ್ರಿಕೆ ಪ್ರಕಟಣೆಯ ಮೂಲಕ ಸಾರ್ವಜನಿಕರನ್ನು ಕಾರ್ಯಕ್ರಮಕ್ಕೆ ಆಹ್ವಾನಿಸಿದ್ದಾರೆ.



# ಕಾನೂನು ಅರಿವು–ನೆರವು ಕಾರ್ಯಕ್ರಮಕ್ಕೆ ಉತ್ತಮ ಸ್ಪಂದನೆ



**ಯಾದಗಿರಿ: ಏ.22:**ಜಿಲ್ಲೆಯ ಅಲ್ಲಿಪುರ ಗ್ರಾಮ ಪಂಚಾಯಿತಿ ಕಾರ್ಯಾಲಯದ ಆವರಣದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ವತಿಯಿಂದ "ಜನಸಾಮಾನ್ಯರಿಗಾಗಿ ನ್ಯಾಯ ಜಾಗೃತಿ ಮಾಹಿತಿ ಮತ್ತು ಪಾರದರ್ಶಕ ಉಪಕ್ರಮ ಯೋಜನೆ–2025" ಕುರಿತು ಕಾನೂನು ಅರಿವು–ನೆರವು ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಯಿತು.

ಕಾರ್ಯಕ್ರಮದಲ್ಲಿ ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಹಾಗೂ ನ್ಯಾಯಾಧೀಶ ಮರಿಯಪ್ಪ ಅವರು ಭಾಗವಹಿಸಿ, ಗ್ರಾಮಸ್ಥರಿಗೆ ವಿವಿಧ ಕಾನೂನುಗಳ ಬಗ್ಗೆ ಸರಳ ಹಾಗೂ ಸ್ಪಷ್ಟ ಮಾಹಿತಿಯನ್ನು ನೀಡಿದರು. ತಮ್ಮ ಹಕ್ಕುಗಳು, ಉಚಿತ ಕಾನೂನು ನೆರವು ಪಡೆಯುವ ವಿಧಾನಗಳು ಹಾಗೂ ಸರ್ಕಾರದ ಯೋಜನೆಗಳ ಸದುಪಯೋಗ ಕುರಿತು ವಿವರಿಸಿದರು.

ಗ್ರಾಮೀಣ ಪ್ರದೇಶದ ಜನರಿಗೆ ಕಾನೂನು ಅರಿವು ಮೂಡಿಸುವುದು ಅತ್ಯಂತ ಮುಖ್ಯವಾಗಿದ್ದು, ಇಂತಹ ಕಾರ್ಯಕ್ರಮಗಳು ಸಮಾಜದಲ್ಲಿ ನ್ಯಾಯಬದ್ಧತೆ ಹಾಗೂ ಪಾರದರ್ಶಕತೆಯನ್ನು ಬಲಪಡಿಸುವಲ್ಲಿ ಸಹಕಾರಿ ಎಂದು ಅಭಿಪ್ರಾಯ ವ್ಯಕ್ತವಾಯಿತು.

ಕಾರ್ಯಕ್ರಮದಲ್ಲಿ ಕಾನೂನು ತಜ್ಞರು, ಪ್ರಾಧಿಕಾರದ ಸಿಬ್ಬಂದಿ, ಗ್ರಾಮ ಪಂಚಾಯಿತಿ ಸದಸ್ಯರು ಹಾಗೂ ಗ್ರಾಮಸ್ಥರು ಉಪಸ್ಥಿತರಿದ್ದರು.

# ಫಲಿತಾಂಶಕ್ಕೂ ಮುನ್ನವೇ ಮುಸ್ಲಿಂ ನಾಯಕರ ವಿರುದ್ಧ ಕ್ರಮ: ಖಾಸಿಂಸಾಬ್ ಆಕ್ಷೇಪ

**ಯಾದಗಿರಿ:ಏ.22:** ದಾವಣಗೆರೆ ದಕ್ಷಿಣ ಉಪ ಚುನಾವಣೆಯಲ್ಲಿ ಪಕ್ಷ ವಿರೋಧಿ ಚಟುವಟಿಕೆ ನಡೆಸಿದ್ದಾರೆಂಬ ಆರೋಪದ ಮೇರೆಗೆ ಮುಸ್ಲಿಂ ನಾಯಕರ ವಿರುದ್ಧ ತೆಗೆದುಕೊಳ್ಳಲಾಗುತ್ತಿರುವ ಕ್ರಮ ದುರುದ್ದೇಶಪೂರಿತವಾಗಿದೆ ಎಂದು ಟೆಂಟ್ ಅಂಡ್ ಡೆಕೋರೇಟರ್ಸ್ ಅಸೋಸಿಯೇಷನ್ ಜಿಲ್ಲಾ ಅಧ್ಯಕ್ಷ ಹಾಗೂ ಸಮುದಾಯದ ಮುಖಂಡ ಖಾಸಿಂಸಾಬ್ ಗಡ್ಡೆಸೂಗೂರು ಆರೋಪಿಸಿದ್ದಾರೆ.

ನಗರದ ಜಿಲ್ಲಾ ಪತ್ರಿಕಾ ಭವನದಲ್ಲಿ ಮಂಗಳವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಚುನಾವಣಾ ಫಲಿತಾಂಶ ಹೊರಬರುವ ಮುನ್ನವೇ ಪಕ್ಷದಿಂದ ಹೊರಹಾಕುವ ಕ್ರಮ ಕೈಗೊಳ್ಳುತ್ತಿರುವುದು ನ್ಯಾಯಸಮ್ಮತವಲ್ಲ ಎಂದು ಆಕ್ಷೇಪ ವ್ಯಕ್ತಪಡಿಸಿದರು.

ಪಕ್ಷ ವಿರೋಧಿ ಚಟುವಟಿಕೆ ಆಧಾರವಾಗಿ ಕ್ರಮ ಕೈಗೊಳ್ಳಬೇಕಾದರೆ, ಮೊದಲು ಉನ್ನತ ನಾಯಕರ ಮೇಲೆಯೇ ಕ್ರಮ ಜರುಗಿಸಬೇಕು ಎಂದು ಅವರು ಹೇಳಿದರು. ರಾಜ್ಯ ಉಸ್ತುವಾರಿ ರಣದೀಪ್ ಸುರ್ಜೇವಾಲಾ, ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ ಹಾಗೂ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಮೇಲೂ ಪ್ರಶ್ನೆಗಳು ಉದ್ಭವಿಸುತ್ತವೆ ಎಂದು ತಿಳಿಸಿದರು.

ರಾಜ್ಯದಲ್ಲಿ ಅಧಿಕಾರ ಹಂಚಿಕೆ ವಿಚಾರವಾಗಿ ಹರಿದಾಡಿದ ಹೇಳಿಕೆಗಳ ಹಿನ್ನೆಲೆಯಲ್ಲಿ ಸುರ್ಜೇವಾಲಾ ಅವರು ಡಿಕೆಶಿಗೆ ಬೆಂಬಲ ನೀಡುತ್ತಿದ್ದಾರೆ. ಅಲ್ಲದೆ, ರಾಹುಲ್ ಗಾಂಧಿ ಅವರ ಸೂಚನೆ ಮೀರಿ ಖಾಸಗಿ ಕಾರ್ಯಕ್ರಮಗಳಲ್ಲಿ



ಭಾಗವಹಿಸಿರುವುದರ ಕುರಿತು ಕೂಡ ಮೊದಲು ಸ್ಪಷ್ಟನೆ ನೀಡಬೇಕು ಎಂದು ಖಾಸಿಂಸಾಬ್ ಒತ್ತಾಯಿಸಿದರು.

ಹಿಂದಿನ ಚುನಾವಣಾ ಸಂದರ್ಭಗಳನ್ನು ಉದಾಹರಿಸಿದ ಅವರು, 2012ರ ವಿಧಾನ ಪರಿಷತ್ ಹಾಗೂ 2013ರ ವಿಧಾನಸಭೆ ಚುನಾವಣೆಯಲ್ಲಿ ನಡೆದ ಘಟನೆಗಳನ್ನು ಉಲ್ಲೇಖಿಸಿ, ಆಗ ಯಾರ ಮೇಲೂ ಕ್ರಮ ಕೈಗೊಳ್ಳದಿದ್ದರೆ ಈಗ ಏಕೆ ಮಾತ್ರ ಮುಸ್ಲಿಂ ನಾಯಕರನ್ನೇ ಗುರಿಯಾಗಿಸಲಾಗಿದೆ ಎಂದು ಪ್ರಶ್ನಿಸಿದರು.

ಈ ಸಂದರ್ಭದಲ್ಲಿ ಸಂಘದ ರಾಜ್ಯ ನಿರ್ದೇಶಕ ರವಿ ಮುದ್ನಾಳ ಸೇರಿದಂತೆ ಇತರರು ಉಪಸ್ಥಿತರಿದ್ದರು.

# ನೆತ್ತಿ ಸುಡುವ ಬಿಸಿಲಿಗೆ ತತ್ತರಿಸಿದ ಜನ ; 80 ರೂ. ತಲುಪಿದ ಎಳನೀರು



**ತುಮಕೂರು,ಏ.22–** ರಾಜ್ಯಾದ್ಯಂತ ದಿನದಿಂದ ದಿನಕ್ಕೆ ಸೂರ್ಯನ ಪ್ರಖರತೆ ಹೆಚ್ಚುತ್ತಿದ್ದು, ಅಕ್ಷರಶಃ ಕೆಂಡದಂತಾಗಿದೆ. ಜನರು ಬೆವರಿ ಬೆಂಡಾಗಿ ಹೋಗಿದ್ದಾರೆ.ಬೆಳಿಗ್ಗೆ 10 ಗಂಟೆಯಾಗುತ್ತಲೇ ಸೂರ್ಯ ತನ್ನ ಪ್ರತಾಪ ತೋರಿಸಲು ಆರಂಭಿಸುತ್ತಿದ್ದು, ಮಧ್ಯಾಹ್ನದ ವೇಳೆಗೆ ರಸ್ತೆಗಿಳಿಯಲು ಜನಸಾಮಾನ್ಯರು ಹೈರಾಣಾಗುತ್ತಿದ್ದಾರೆ. ಪಾದಚಾರಿಗಳು ಹಾಗೂ ದ್ವಿಚಕ್ರ ವಾಹನ ಸವಾರರು ಅತೀವ ತಾಪಮಾನದಿಂದ ತತ್ತರಿಸಿ ಹೋಗಿದ್ದಾರೆ.

ಬಿಸಿಲಿನ ಝಳ ತಾಳಲಾರದೆ ಮಹಿಳೆಯರು ರಸ್ತೆಯಲ್ಲಿ ಸಂಚರಿಸುವಾಗ ಅನಿವಾರ್ಯವಾಗಿ ತಮ ಸೆರಗು ಅಥವಾ ಬಟ್ಟೆಯ ವೇಲ್‌ಗಳನ್ನು ತಲೆಮೇಲೆ ಹಾಕಿಕೊಂಡು ಸಾಗುತ್ತಿರುವ ದೃಶ್ಯಗಳು ನಗರದಾದ್ಯಂತ ಸಾಮಾನ್ಯವಾಗಿದೆ. ಛತ್ರಿಗಳ ಮೊರೆ ಹೋದರೂ ಸುಡುವ ಗಾಳಿಯಿಂದ ತಪ್ಪಿಸಿಕೊಳ್ಳುವುದು ಕಷ್ಟಕರವಾಗಿದ್ದು, ಮಹಿಳೆಯರು ಹಾಗೂ ಕಾಲೇಜು ವಿದ್ಯಾರ್ಥಿನಿಯರು ಮುಖ ಹಾಗೂ ತಲೆಯನ್ನು ಬಟ್ಟೆಯಿಂದ ಪೂರ್ತಿಯಾಗಿ ಮುಚ್ಚಿಕೊಂಡು ಬಿಸಿಲಿನಿಂದ ರಕ್ಷಣೆ ಪಡೆಯಲು ಹರಸಾಹಸ ಪಡುತ್ತಿದ್ದಾರೆ.

ನಗರದ ಪ್ರಮುಖ ರಸ್ತೆಗಳಲ್ಲಿ ಜನಸಂಚಾರ ವಿರಳವಾಗುತ್ತಿದ್ದು, ಜನರು ತಂಪು ಪಾನೀಯ, ಎಳನೀರು ಹಾಗೂ ಹಣ್ಣಿನ ರಸಗಳ ಅಂಗಡಿಗಳತ್ತ ಹೆಜ್ಜೆ ಹಾಕುತ್ತಿದ್ದಾರೆ. ಮುಂದಿನ ದಿನಗಳಲ್ಲಿ ತಾಪಮಾನ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇರುವುದರಿಂದ, ಸಾರ್ವಜನಿಕರು ಮನೆಯಿಂದ ಹೊರಬರುವಾಗ ಹೆಚ್ಚಿನ ಜಾಗ್ರತೆ ವಹಿಸಬೇಕಾಗಿದೆ.

ಬಿಸಿಲಿನ ತಾಪಕ್ಕೆ ಊಟ, ತಿಂಡಿ ಸೇವನೆ ಕಡಿಮೆಯಾಗಿದ್ದು, ಕೇವಲ ನೀರು, ಎಳನೀರು, ತಂಪು ಪಾನೀಯ ಕುಡಿದು ಹೊಟ್ಟೆ ತುಂಬಿಸಿಕೊಳ್ಳುವಂತಾಗಿದೆ. ಹೋಟೆಲ್‌ಗಳಲ್ಲಿ ಊಟ ಸೇವಿಸುವವರು ಕಡಿಮೆಯಾಗಿದ್ದು, ಜ್ಯೂಸ್? ಅಂಗಡಿಗಳ ಮುಂದೆ ಜನರು ತುಂಬಿ ತುಳುಕುತ್ತಿದ್ದಾರೆ.
ನಿರ್ಜಲೀಕರಣವಾಗಬಾರದೆಂದು ಹೆಚ್ಚಿನ ಜನರು ಎಳನೀರು ಮೊರೆಹೋಗಿದ್ದು, ಬೆಲೆ ಗಗನಕ್ಕೆ?ರಿದೆ. ಬೆಂಗಳೂರಿನಲ್ಲಿ 80 ರೂ.ಗಳಿಂದ 90 ರೂ.ಗೆ ಮಾರಾಟವಾಗುತ್ತಿದೆ. ಇದೇ ರೀತಿ ಮುಂದುವರೆದರೆ ಶತಕ ಭಾರಿಸಲಿದೆ.

ರೋಗಬಾಧೆ, ನೀರಿನ ಕೊರತೆಯಿಂದ ಇಳುವರಿ ಕುಂಠಿತವಾಗಿ ಬೇಡಿಕೆ ಹೆಚ್ಚಾದ ಪರಿಣಾಮ ಬೆಲೆ ಏರಿಕೆಯಾಗಿದೆ. ಅದರಲ್ಲೂ ಜನರು ಹಣ್ಣುಗಳ ಪಾನೀಯಕ್ಕಿಂತ ನೈಸರ್ಗಿಕ ಹಾಗೂ ಆರೋಗ್ಯಕರ ಎಳನೀರು ಸೇವನೆಗೆ ಹೆಚ್ಚು ಆಸಕ್ತಿ ವಹಿಸಿದ್ದು, ಬೇಡಿಕೆ ಹೆಚ್ಚಾದ ಕಾರಣ ಬೆಲೆಯೂ ಕೂಡಾ ಹೆಚ್ಚಾಗಿದೆ.

ಆರೋಗ್ಯದ ಬಗ್ಗೆ ಮುನ್ನೆಚ್ಚರಿಕೆ :
ಬಿಸಿಲಿನ ತಾಪದಿಂದ ಪಾರಾಗಲು ಮಧ್ಯಾಹ್ನದ ಸಮಯದಲ್ಲಿ ಹೊರಗಿನ ಸಂಚಾರ ನಿಲ್ಲಿಸುವುದು ಸೂಕ್ತ. ಆದಷ್ಟು ಮನೆಯಲ್ಲೆ? ಇರುವುದು ಉತ್ತಮ. ಆಗಾಗ್ಗೆ ನೀರು, ನಿಂಬೆರಸ, ಎಳನೀರು ಸೇವಿಸಿ, ತಿಳಿಬಣ್ಣದ ಹತ್ತಿಬಟ್ಟೆಯನ್ನು ಧರಿಸಿ ಜೊತೆಗೆ ಮಸಾಲೆಯುಕ್ತ ಪದಾರ್ಥಗಳಿಂದ ದೂರವಿರಿ, ಮಜ್ಜಿಗೆ, ಗಂಜಿ, ರಾಗಿ ಅಂಬಲಿ ಸೇವಿಸಿ ದೇಹವನ್ನು ಆದಷ್ಟು ತಂಪಾಗಿಡುವಂತೆ ನೋಡಿಕೊಳ್ಳುವುದು ಉತ್ತಮ.

# ಸನಾತನ ಧರ್ಮದ ರಕ್ಷಣೆಗೆ ಶಂಕರರ ಕೊಡುಗೆ ಅನನ್ಯ: ಪಾಂಡುರಂಗ ಮಹಾರಾಜ್



**ಜೇವರ್ಗಿ:ಏ.22:** ಸನಾತನ ಹಿಂದೂ ಧರ್ಮದ ಪುನರುತ್ಥಾನಕ್ಕಾಗಿ ಹಗಲಿರಳು ಶ್ರಮಿಸಿದ ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯರ ತತ್ವಗಳು ಸಾರ್ವಕಾಲಿಕ ಸತ್ಯ ಎಂದು ಶ್ರೀ ತ್ರಿವಿಕ್ರಮಾನಂದ ಸರಸ್ವತಿ ಸ್ವಾಮಿಗಳ ಮಠದ ಶ್ರೀ ಪಾಂಡುರಂಗ ಮಹಾರಾಜ್ ಗಂವ್ಹಾರ ಅವರು ಅಭಿಪ್ರಾಯಪಟ್ಟರು.
ಪಟ್ಟಣದ ತಾಲೂಕು ಆಡಳಿತ ಸೌಧದಲ್ಲಿ ಮಂಗಳವಾರ ಹಮ್ಮಿಕೊಳ್ಳಲಾಗಿದ್ದ ಶ್ರೀಮದ್ ಜಗದ್ಗುರು ಆದಿ ಶಂಕರಾಚಾರ್ಯರ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಆಶೀರ್ವಚನ ನೀಡಿದರು.
"ದೇಶದ ನಾಲ್ಕು ದಿಕ್ಕುಗಳಲ್ಲಿ ಮಠಗಳನ್ನು ಸ್ಥಾಪಿಸುವ ಮೂಲಕ ಭಾರತೀಯ ಸಂಸ್ಕೃತಿಯನ್ನು ಒಂದುಗೂಡಿಸಿದ ಕೀರ್ತಿ ಶಂಕರಾಚಾರ್ಯರಿಗೆ ಸಲ್ಲುತ್ತದೆ. ಅವರ ಅದ್ವೈತ ಸಿದ್ಧಾಂತವು ಮನುಕುಲದ ಏಕತೆಯನ್ನು ಸಾರುತ್ತದೆ. ಇಂದಿನ ಯುವ ಪೀಳಿಗೆಗೆ ಇಂತಹ ಮಹಾನ್ ದಾರ್ಶನಿಕರ ಜೀವನ ಚರಿತ್ರೆ ಪ್ರೇರಣೆಯಾಗಲಿ" ಎಂದು ಶ್ರೀಗಳು ಹಿತವಚನ ನುಡಿದರು.
ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ತಾಲೂಕು ತಹಶೀಲ್ದಾರರು ಹಾಗೂ ದಂಡಾಧಿಕಾರಿಗಳಾದ ಶ್ರೀ ಮಲ್ಲಣ್ಣ ಯಲಗೋಡ ಅವರು ಮಾತನಾಡಿ, "ಆದಿ ಶಂಕರಾಚಾರ್ಯರು ಹಾಕಿಕೊಟ್ಟ ದಾರಿಯಲ್ಲಿ ನಡೆಯುವುದು ನಮಗೆಲ್ಲ ಹೆಮ್ಮೆಯ ವಿಷಯ. ತಾಲೂಕು ಆಡಳಿತವು ಶಿಸ್ತುಬದ್ಧವಾಗಿ ಈ ಜಯಂತಿಯನ್ನು ಆಚರಿಸುವ ಮೂಲಕ ಅವರ ವಿಚಾರಧಾರೆಗಳನ್ನು ಜನಮಾನಸಕ್ಕೆ ತಲುಪಿಸುವ ಪ್ರಯತ್ನ ಮಾಡುತ್ತಿದೆ" ಎಂದರು.
ಕಾರ್ಯಕ್ರಮದಲ್ಲಿ ವಿಪ್ರ ಸಮಾಜದ ತಾಲೂಕ ಅಧ್ಯಕ್ಷ ರಮೇಶ ಎನ್. ವಕೀಲ್, ಪಿ.ಕಾರ್ಡ್ ಬ್ಯಾಂಕ್ ಮಾಜಿ ಅಧ್ಯಕ್ಷ ಹಳ್ಳೆಪ್ಪಚಾರ್ಯ ಜೋಶಿ, ಉಮೇಶ್ ಭಟ್ ಜೋಶಿ ನೆಲೋಗಿ,ರಾಘವೇಂದ್ರ ಕುಲಕರ್ಣಿ ನರಿಬೋಳ, ದತ್ತಾತ್ರೇಯರಾವ ಕುಲಕರ್ಣಿ ಕೋಳಕೂರು, ರಮಕಾಂತ ಭಟ್ ಜೋಶಿ ನರಿಬೋಳ, ಶ್ರೀ ಪಾದರಾವ ಕುಲಕರ್ಣಿ ಯರಗಲ್, ಶ್ಯಾಮರಾವ ಕುಲಕರ್ಣಿ ವಿನೋದ್ ಕುಲಕರ್ಣಿ ಸಾತ್ಖೇಡ, ಕಿಶನರಾವ ವಕೀಲ, ಪ್ರಕಾಶ ಆಲಬಾಳ್, ಪುನೀತ್ ಕುಲಕರ್ಣಿ, ರವೀಂದ್ರ ವಕೀಲ, ಸುಧೀಂದ್ರ ವಕೀಲ, ಲಕ್ಷ್ಮೀಕಾಂತ ಕುಲಕರ್ಣಿ ಹೋತಿನಮಡು, ಅಪ್ಪಾರಾವ ಪಾಟೀಲ್, ಗುರುರಾಜ ಪೊದ್ದರ್, ಪಾಂಡುರಂಗ ಕುಲಕರ್ಣಿ, ಪ್ರವೀಣ ಆಲ್ಬಾಳ ಶ್ರೀನಿವಾಸ ಮಳ್ಳಿ, ನಟರಾಜ್ ಕುಲಕರ್ಣಿ, ಮನೋಜ ಕುಲಕರ್ಣಿ ಸಂಜು ಕುಮಾರ್ ಜೋಶಿ, ನಾರಾಯಣ ನೀಲೂರ, ಶಂಕರ್ ಯಲ್ಗೋಡ, ದತ್ತಾತ್ರೆಯ ನ್ಯಾವನೂರ ವಿಠ್ಠಲ್ ಅವರಾದ, ಸೇರಿದಂತೆ ವಿವಿಧ ಇಲಾಖೆಯ ಅಧಿಕಾರಿಗಳು ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

# ಭಯೋತ್ಪಾದನೆ ವಿರುದ್ಧ ಶೂನ್ಯ ಸಹಿಷ್ಣುತಾ ನೀತಿ ; ಅಮಿತ್ ಶಾ



**ನವದೆಹಲಿ, ಏ. 22–** ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಳೆದ ವರ್ಷ ಪಹಲ್ಗಾಮ್ ಭಯೋತ್ಪಾದಕ ದಾಳಿಯಲ್ಲಿ ಸಾವನ್ನಪ್ಪಿದವರನ್ನು ಸ್ಮರಿಸಿಕೊಂಡರು ಮತ್ತು ಭಯೋತ್ಪಾದನೆ ಮತ್ತು ಅದನ್ನು ಆಶ್ರಯಿಸುವವರ ವಿರುದ್ಧ ಭಾರತ ತನ್ನ ಶೂನ್ಯ ಸಹಿಷ್ಣುತಾ ನೀತಿಯನ್ನು ಮುಂದುವರಿಸುತ್ತದೆ ಎಂದು ಹೇಳಿದರು.

ನಮ್ಮ ಜನರನ್ನು ಕಳೆದುಕೊಂಡ ದುಃಖ ಮತ್ತು ನೋವು ಇನ್ನೂ ಪ್ರತಿಯೊಬ್ಬ ಭಾರತೀಯನ ಹೃದಯದಲ್ಲಿದೆ ಎಂದು ಅವರು ಎಕ್ಸ್ ಮಾಡಿದ್ದಾರೆ.ಭಯೋತ್ಪಾದನೆ ಮಾನವೀಯತೆಯ ದೊಡ್ಡ ಶತ್ರು, ಅದರ ವಿರುದ್ಧ ಹೋರಾಡಲು ಮತ್ತು ಸೋಲಿಸಲು ನಾವು ಒಗ್ಗಟ್ಟಿನಿಂದ ನಿಲ್ಲಬೇಕು. ಭಯೋತ್ಪಾದನೆ ಮತ್ತು ಅದನ್ನು ಆಶ್ರಯಿಸುವವರ ವಿರುದ್ಧ ಭಾರತ ತನ್ನ ಶೂನ್ಯ ಸಹಿಷ್ಣುತಾ ನೀತಿಯನ್ನು ಮುಂದುವರಿಸುತ್ತದೆ ಎಂದು ಅವರು ಹೇಳಿದರು.
ಪಾಕಿಸ್ತಾನ ಮೂಲದ ಭಯೋತ್ಪಾದಕ ಗುಂಪು ಲಷ್ಕರ್– ಎ–ತೈಬಾ ಕಳೆದ ವರ್ಷ ಈ ದಿನ ಜಮ್ಮು ಮತ್ತು ಕಾಶ್ಮಿ?ರದ ಪಹಲ್ಗಾಮ್‌ನಲ್ಲಿ ದಾಳಿ ನಡೆಸಿತು, ಇದರಲ್ಲಿ 26 ಅಮಾಯಕರು ಸಾವನ್ನಪ್ಪಿದ್ದರು.
ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ, ಭಾರತವು ಪಾಕಿಸ್ತಾನದ ವಿರುದ್ಧ ಆಪರೇಷನ್ ಸಿಂಧೂರ್ ಎಂಬ ಪ್ರತೀಕಾರದ ಮಿಲಿಟರಿ ದಾಳಿಯನ್ನು ನಡೆಸಿತು, ಇದರಲ್ಲಿ ಭಾರತೀಯ ಸಶಸ್ತ್ರ ಪಡೆಗಳು ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದಲ್ಲಿ ಮಿಲಿಟರಿ ಮತ್ತು ಭಯೋತ್ಪಾದಕ ಮೂಲಸೌಕರ್ಯಗಳನ್ನು ನಾಶಪಡಿಸಿದವು.

## ಬಸವತತ್ವ ಪಾಲನೆಯಿಂದ ವಿಶ್ವಮಾನವರಾಗಲು ಸಾಧ್ಯ: ಸಚಿವ ತಿಮ್ಮಾಪುರ

**ಜಮಖಂಡಿ ಏ.22:** ವಿಶ್ವಗುರು ಬಸವಣ್ಣನವರ ತತ್ವಗಳನ್ನು ಕೇವಲ ಪೂಜೆಗೆ ಅಥವಾ ಪ್ರವಚನಗಳಿಗೆ ಸೀಮಿತಗೊಳಿಸದೇ, ಜೀವನದಲ್ಲಿ ಅಳವಡಿಸಿಕೊಂಡಾಗ ಮಾತ್ರ ಸಮಾಜದಲ್ಲಿ ಶಾಂತಿ, ಸಮಾನತೆ ಹಾಗೂ ಮಾನವೀಯತೆ ಬೆಳೆಯುತ್ತದೆ. ಬಸವತತ್ವ ಪಾಲನೆಯಿಂದ ವಿಶ್ವಮಾನವರಾಗಲು ಸಾಧ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪುರ ಹೇಳಿದರು.

ನಗರದ ಓಲೆಮಠದ ಆಶ್ರಯದಲ್ಲಿ ನಡೆದ ಆರು ದಿನಗಳ ಜಾತ್ರಾಮಹೋತ್ಸವದ ಕೊನೆಯ ದಿನವಾದ ಸೋಮವಾರ ಸಂಜೆ ನಡೆದ ಬಸವ ಜಯಂತಿ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಅವರು ಮಾತನಾಡಿದರು.

ಇಂದಿನ ಸಮಾಜದಲ್ಲಿ ಬದುಕು, ರಾಜಕಾರಣ, ಆಹಾರ, ನೀರು ಎಲ್ಲವೂ ಕಲುಷಿತಗೊಂಡಿದ್ದು, ಮನುಷ್ಯನಿಗೆ ದಿಕ್ಕುತೋಚದ ಪರಿಸ್ಥಿತಿ ನಿರ್ಮಾಣವಾಗಿದೆ. ಧರ್ಮ–ಧರ್ಮಗಳ ನಡುವೆ ಮಾತ್ರವಲ್ಲ, ಒಂದೇ ಧರ್ಮದೊಳಗೂ ಸಂಘರ್ಷ ಹೆಚ್ಚಾಗಿದೆ. ಇಂತಹ ಸಂದರ್ಭಗಳಲ್ಲಿ ಮಠಮಾನ್ಯಗಳು ಸಮಾಜಕ್ಕೆ ದಿಕ್ಕು ತೋರಿಸುವ ಬೆಳಕಾಗಬೇಕು ಎಂದು ಹೇಳಿದರು.

ಯುವಕರಿಗೆ ಉದ್ಯೋಗದ ಕೊರತೆ ಎದುರಾಗುತ್ತಿದ್ದು, ಆತಂಕಕಾರಿ ವಾತಾವರಣ ನಿರ್ಮಾಣವಾಗಿದೆ. ಮಠಮಾನ್ಯಗಳ ಮಾರ್ಗದರ್ಶನದಿಂದ ಮಾತ್ರ ಮಾನವನಿಗೆ ಶಾಂತಿ ಮತ್ತು ನೆಮ್ಮದಿ ಸಾಧ್ಯ ಎಂದು ಅಭಿಪ್ರಾಯಪಟ್ಟರು.

ಮುಖ್ಯ ಅತಿಥಿಯಾಗಿ ಮಾತನಾಡಿದ ಉದ್ದಿಮೆದಾರ ಸಂಗಮೇಶ ನಿರಾಣಿ, ಓಲೆಮಠದ ಪೂಜ್ಯರು ಕೈಗೊಂಡಿರುವ ವ್ಯಸನಮುಕ್ತ ಗ್ರಾಮಗಳ ಅಭಿಯಾನ ಯಶಸ್ವಿಯಾಗಿದ್ದು, ನೆರೆಯ ತಾಲ್ಲೂಕುಗಳಲ್ಲೂ ಇದರ ಪ್ರಭಾವ ಕಾಣಿಸುತ್ತಿದೆ ಎಂದು ಹೇಳಿದರು. ಮುಂದಿನ ದಿನಗಳಲ್ಲಿ ಆನಂದ ದೇವರು ಶ್ರೀಗಳ ಪಟ್ಟಾಧಿಕಾರ ಸಮಾರಂಭವನ್ನು ಅದ್ದೂರಿಯಾಗಿ ಆಯೋಜಿಸುವುದಾಗಿ ತಿಳಿಸಿದರು.

ಈ ಸಂದರ್ಭದಲ್ಲಿ ಮಹಾದೇವಪ್ಪ ಝುಲಪಿ ರಚಿಸಿದ ವೈಜ್ಞಾನಿಕ ವೈಚಾರಿಕ ಪ್ರಜ್ಞೆ–2 ಹಾಗೂ ವಿಶ್ವಗುರು ಬಸವಣ್ಣನವರ ನೂರೊಂದು ವಚನ ದೀಪ್ತಿ ಮಾಲಿಕೆ–4 ಕೃತಿಗಳನ್ನು ಲೋಕಾರ್ಪಣೆ ಮಾಡಲಾಯಿತು.

ಕಾರ್ಯಕ್ರಮದಲ್ಲಿ ನೃತ್ಯ, ಸಂಗೀತ ಹಾಗೂ ಸಾಂಸ್ಕೃತಿಕ ಪ್ರದರ್ಶನಗಳು ನಡೆಯಿತು. ಸ್ಥಳೀಯ ಪ್ರತಿಭಾವಂತರನ್ನು ಶ್ರೀಮಠದ ವತಿಯಿಂದ ಸನ್ಮಾನಿಸಲಾಯಿತು.

ಓಲೆಮಠದ ಆನಂದ ದೇವರು ಶ್ರೀಗಳು ಕಾರ್ಯಕ್ರಮದ ನೇತೃತ್ವ ವಹಿಸಿದ್ದರು. ವಿವಿಧ ಮಠಾಧೀಶರು, ಗಣ್ಯರು ಹಾಗೂ ಭಕ್ತರು ಭಾಗವಹಿಸಿದ್ದರು.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE